

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 53 Thursday 31-10-2024 E-mail : maruti.b.hosamani76@gmail.com Page: 4 Price : Rs. 1/-


## ಸದ್ದು ಮಾಡುತ್ತಿದೆ "ತಾರಕೇಶ್ವರ" ಟ್ರೇಲರ್

**ಸಿಹಿ ಕಹಿ ಸುದ್ದಿ**

**ಬೇವೂರು** : ಯುವಕರು ದೇಶದ ಆಸ್ತಿಯಾಗಿದ್ದು ಸಾಮಾಜಿಕ ಸಮಸ್ಯೆಗಳನ್ನು ನಿವಾರಿಸಲು ಕಂಕಣ ಬದ್ದರಾಗ ಬೇಕೆ-ಂದು ಉಪನ್ಯಾಸಕರಾದ ಎಸ್.ಎಸ್ ಆದಾಪೂರ ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತಾನಾಡಿದ ಅವರು ಸೇವಾ ಮನೋಭಾವನೆಯನ್ನು ರೂಢಿಸಿ ಕೊಳ್ಳಬೇಕೆಂದು ಹೇಳಿದರು. ಅತಿಥಿಗಳಾಗಿ ಭಾಗವಹಿಸಿ ಮಾತಾನಾಡಿದ ಡಾ, ಸಂಗಮೇಶ ಹಂಚಿನಾಳ ಬುದ್ದ, ಬಸವ, ಅಂಬೇಡ್ಕರ್ ಅವರು ಈ ನೆಲದಲ್ಲಿ ಜಾಗೃತಿ ಮೂಡಿಸಿ ಚಿರ ಸ್ಮರಣೀಯ ರೆನಿಸಿದ್ದಾರೆ. ಆರೋಗ್ಯ, ಪರಿಸರ ಕಾಳಜಿ, ಭ್ರಷ್ಟಾಚಾರ ಮುಂತಾದವುಗಳ ಕುರಿತು ಜಾಗೃತಿ



ಮೂಡಿಸಲು ಎನ್.ಎಸ್.ಎಸ್. ಸಪ್ತಾಹ ಚಟುವಟಿಕೆಗಳು ಪ್ರೇರಕ ಎನಿಸಿವೆ ಎಂದರು. ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಡಾ, ಜಗದಿಶ ಭೈರಮಟ್ಟಿ, ಹಿರಿಯ ಉಪನ್ಯಾಸಕರಾದ ಬಿ.ಬಿ ಬೇವೂರು, ಎನ್.ಎಸ್.ಎಸ್ ಸಂಯೋಜನಾ ಅಧಿಕಾರಿಗಳಾದ ಜಿ.ಎಸ್ ಗೌಡರ, ಇಂಗ್ಲೀಷ ಉಪನ್ಯಾಸಕ ಡಿ.ವಾಯ್ ಬುಡ್ಡಿಯವರ, ಡಾ, ಎ.ಎಮ್ ಗೊರಚಿಕ್ಕನವರ ಉಪಸ್ಥಿತರಿದ್ದರು. ನಾಗೇಶ ಬೆಣ್ಣೂರು ನಿರೂಪಿಸಿ ವಂದಿಸಿದರು. ಫಾತಿಮಾ ನಧಾಪ, ವಿಜಯಲಕ್ಷ್ಮೀ ಬಂಡಿವಡ್ಡರ, ಜ್ಯೋತಿ ಗೌಡರ ವಿದ್ಯಾರ್ಥಿನಿಯರು ಪ್ರಾರ್ಥಿಸಿದರು.

**ವರದಿ:– ಅಮರೇಶ. ಗೊರಚಿಕ್ಕನವರ**

## ಸಿಹಿ ಕಹಿ ಕನ್ನಡ ದಿನ ಪತ್ರಿಕೆ ವರದಿಗೆ–ಫಲಶೃತಿ ಸಾರ್ವಜನಿಕರಿಂದ ಪ್ರಶಂಸೆ

**ಸಿಹಿ ಕಹಿ ಸುದ್ದಿ,**

**ಕೊಟ್ಟೂರು** : ಪಟ್ಟಣದ ಸಮೀಪ ಸನ್ನಿಧಿ ಕಾಲೇಜ್ ಮುಂಭಾಗ ರಸ್ತೆಯ ಗುಂಡಿಗಳ ಬಗ್ಗೆ ಅಕ್ಟೋಬರ್ 26 ರಂದು ಸಿಹಿ–ಕಹಿ ದಿನ ಪತ್ರಿಕೆಯಲ್ಲಿ ಸುದ್ದಿ ಪ್ರಚಾರ ದಿಂದ ಎಚ್ಚರಗೊಂಡ ಅಕ್ಟೋಬರ್ 30 ರಂದು ಸದ್ಯದ ಮಟ್ಟಿಗೆ ದುರಸ್ತಿ ಮಾಡಿರುವ ಪಿಡಬ್ಲ್ಯೂಡಿ ಅಧಿಕಾರಿಗಳಿಗೆ ರೈತ ಮುಖಂಡ ಜಯಪ್ರಕಾಶ್ ನಾಯಕ್ ಗುಡಿಯರ್ ಮಲ್ಲಿಕಾರ್ಜುನ್ ರಾಜ್ಯ ರೈತ ಸಂಘದ ಕಾರ್ಯದರ್ಶಿಗಳು ಮತ್ತು ಸಾರ್ವಜನಿಕರು ಧನ್ಯವಾದಗಳು ತಿಳಿಸಿದರು.





2024–25 ನೇ. ಸಾಲಿನ ಜುಲೈ ಮತ್ತು ಆಗಸ್ಟ್ ಮಾಯೆಯಲ್ಲಿ ಅತಿವೃಷ್ಟಿ ಹಾಗೂ ನೆರೆ ಹಾವಳಿಯಿಂದ ಹಾನಿ ಗೊಳಗಾದ ರಸ್ತೆ ಹಾಗೂ ಸೇತುವೆಗಳ ದುರಸ್ತಿ ಕಾಮಗಾರಿಗಳಿಗೆ ಅನುದಾನ ದಡಿಯಲ್ಲಿ 10 ಲಕ್ಷ ಬಿಡುಗಡೆ ಯಾಗಿದೆ ಕೂಡಲೇ ದುರಸ್ತಿ ಮಾಡುತ್ತೇವೆ ಎಂದು ನಾಗನಗೌಡ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ದೊಡ್ಮನಿ ಕೊಟ್ರೇಶ್ ಇಂಜಿನಿಯರ್ ನಮ್ಮ ಪತ್ರಿಕೆಗೆ ತಿಳಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್.ಕುಮಾರ್.ಸಿ.ಕೊಟ್ಟೂರು**

## ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ–ಕೊರಮ ಸಮಾಜದಿಂದ ಅಭಿನಂದನೆಗಳು

**ಸಿಹಿ ಕಹಿ ಸುದ್ದಿ**

**ಗೂಡುರು** : ಇಲಕಲ್ಲ ತಾಲೂಕಿನ ಸಮಿಪದ ಗುಡೂರು ಏಸ್.ಸಿ ಗ್ರಾಮದ ಶ್ರೀ ರಾಮಪ್ಪ ಭೀಮಪ್ಪ ಭಜಂತ್ರಿ ಇವರಿಗೆ ತಾಲೂಕು ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಆಗಿದ್ದಾರೆ, ಸುಮಾರು 40 ವರ್ಷಗಳಿಂದ ಶಹನಾಯಿ ವಾದಕರಾಗಿ, ರಾಜ್ಯದ ಅನೇಕ ಭಾಗಗಳಲ್ಲಿ ಕಾರ್ಯಕ್ರಮ ನೀಡಿ ಅನೇಕ ಉತ್ಸವದಲ್ಲಿ ಶಹನಾಯಿ ವಾದಕರಾಗಿ ಗುರುತಿಸಿ ಕೊಂಡಿ–ದ್ದರು, ಇಂದು ಈ ಹಿರಿಯ ಕಲಾವಿದರಿಗೆ ಇಲಕಲ್ಲ ತಾಲ್ಲೂಕ ಆಡಳಿತ ಕಛೇರಿ ಇವರನ್ನು ಗುರುತಿಸಿ ಈ ಕನ್ನಡ ರಾಜ್ಯೋತ್ಸವ



ಪ್ರಶಸ್ತಿ ನೀಡಿದ್ದಕ್ಕೆ ಮಾನ್ಯ ಶಾಸಕರಿಗೆ ಹಾಗೂ ತಾಲೂಕಿನ ತಹಶಿಲ್ದಾರರಿಗೆ ಮತ್ತು ಪ್ರಶಸ್ತಿ ಆಯ್ಕೆ ಸಮಿತಿ ಮಂಡಳಿಗೆ ಕೊರಮ ಸಮಾಜದ ಯುವ ಮುಖಂಡ ಶ್ರೀ ಡಿ,ಬಿ,ವಿಜಯಶಂಕರ್, ತಾಲೂಕ ಅಧ್ಯಕ್ಷ ಲಕ್ಷ್ಮಣ್ಣ ಸಂಗಮದ ಹಾಗೂ ಗ್ರಾಮದ ಸಮಾಜದ ಅಧ್ಯಕ್ಷ ಶ್ರೀಶೈಲಪ್ಪ ಭಜಂತ್ರಿ, ಹಮನಂತ ಭಜಂತ್ರಿ ಯಮನಪ್ಪ ಭಜಂತ್ರಿ, ರೋಮಣ್ಣ ಭಜಂತ್ರಿ, ಶರಣಪ್ಪ ಭಜಂತ್ರಿ, ಬಂಡೆಪ್ಪ ಭಜಂತ್ರಿ, ಮಾರುತಿ, ಭಜಂತ್ರಿ, ಸಮಾಜದ ಮುಖಂಡರು ಅಭಿನಂದನೆಗಳು ಸಲ್ಲಿಸಿದ್ದಾರೆ.

## ಮಾನವೀಯತೆ ಮೆರೆದ ಧರ್ಮಸ್ಥಳ ಸಂಸ್ಥೆಯ ಕಾರ್ಯಕರ್ತರು

**ಸಿಹಿ ಕಹಿ ಸುದ್ದಿ**

**ಹೊಸಪೇಟೆ**:ತಾಲೂಕಿನ ಚಿತವಾಡಗಿ ವ್ಯಾಪ್ತಿಯ ಖಾಜಾ ನಗರದಲ್ಲಿ ಮೆಹಬುಬ್ ಭಾಷಾ ಹಾಗೂ ನಂದಿ ಬಂಡಿ ಗ್ರಾಮದಲ್ಲಿ ಹುಲಿಗೆಮ್ಮ ಎನ್ನುವವರು ಹಲವು ದಿನಗಳಿಂದ ಅಂಗಾಂಗ ವೈಫಲ್ಯ ದಿಂದ ಬಳಲುತ್ತಿದ್ದರು ಇದನ್ನು ಗಮನಿಸಿದ



ಧರ್ಮಸ್ಥಳ ಸಂಸ್ಥೆಯ ಕಾರ್ಯಕರ್ತರು ಇವರಿಗೆ ಉಚಿತವಾಗಿ ವ್ಹಿಲ್ ಚೇರ್ ಕೊಡಿಸಬೇಕೆಂದು ಪರಮ ಪೂಜ್ಯರಿಗೆ ಮನವಿ ಸಲ್ಲಿಸಿದ್ದರು. ಇವರ ಮನವಿಗೆ ಪುರಸ್ಕರಿಸಿದ ಪೂಜ್ಯರು ಜನ ಮಂಗಳ ಕಾರ್ಯಕ್ರಮದ ಅಡಿಯಲ್ಲಿ ಇವರಿಗೆ ಉಚಿತವಾಗಿ ವ್ಹಿಲ್ ಚೇರ್ ಕಳುಹಿಸಿ ಕೊಟ್ಟಿದ್ದಾರೆ. ಈ ದೀನ ಈ ಸಲಕರಣೆಯನ್ನು ತಾಲ್ಲೂಕಿನ ಯೋಜನಾಧಿಕಾರಿ ಶ್ರೀ ಮಾರುತಿ ಎಸ್ ಸರ್ ಅವರು ಫಲಾನುಭವಿಗೆ ನೀಡಿ ಅವರ ಆರೋಗ್ಯ ಕ್ಷೇಮ ವಿಚಾರಿಸಿ ನಂತರ ಮಾತನಾಡಿದ ಅವರು ಪರಮ ಪೂಜ್ಯರ ಜನಪ್ರಿಯ ಕಾರ್ಯಕ್ರಮವಾದ ಜಲ ಮಂಗಳ ಕಾರ್ಯಕ್ರಮದ ಅಡಿಯಲ್ಲಿ ರಾಜ್ಯದಲ್ಲಿ ಈಗಾಗಲೇ ಸಾವಿರಾರು ವಿಕಲ ಚೇತನರಿಗೆ ಉಚಿತವಾಗಿ ಅವರಿಗೆ ಅಗತ್ಯವಿರುವ ಸಲಕರಣೆಗಳನ್ನು ಅವರ ಮನೆ ಬಾಗಿಲಿಗೆ ತಲುಪಿಸಲಾಗುತ್ತಿದೆ. ವಿಕಲಚೇತನರು ಇದರ ಸದುಪಯೋಗ ಪಡಿಸಿ ಕೊಳ್ಳಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ವಲಯದ ಮೇಲ್ವಿಚಾರಕ್ಕೆ ಶ್ರೀಮತಿ ವಿನೂತ ಮೇಲ್ವಿಚಾರಕರಾದ ಮಲ್ಲಪ್ಪ ತಾಲೂಕಿನ ಕೃಷಿ ಅಧಿಕಾರಿ ಚನ್ನಪ್ಪ ಸೇವಾ ಪ್ರತಿನಿಧಿ ನೀಲಮ್ಮ, ಲಕ್ಷ್ಮಿ ಹಾಗೂ ಸ್ವಸಹಾಯ ಸಂಘದ ಸದಸ್ಯರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಾಲತೇಶ್.ಶೆಟ್ಟರ್.ಹೊಸಪೇಟೆ**




# ಪ್ರತಿನಿತ್ಯ ದಾನ ಧರ್ಮ ಮಾಡಿರಿ ಚಳಗೇರಾ ಶ್ರೀಗಳು

**ಇಳಕಲ್ :** ಪ್ರತಿದಿನವೂ ದಾನ ಧರ್ಮ ಮಾಡುವ ಸದ್ಭಾವನೆ ಎಲ್ಲರಲ್ಲೂ ಬರಬೇಕೆಂದು ಚಳಗೇರಿಯ ಪೂಜ್ಯ ವೀರ ಸಂಗಮೇಶ್ವರ ಶಿವಾಚಾರ್ಯರು ಹೇಳಿದರು.

ಬಸವ ನಗರದ ಗಣೇಶ ಗುಡಿಯಲ್ಲಿ ಕುಷ್ಟಗಿ ತಾಲೂಕಿನ ಚಳಗೇರಿ ಗ್ರಾಮದ ಹಿರೇಮಠದ ಈ ನಾಡು ಕಂಡ ನಡೆದಾಡುವ ದೇವರಾದ ಪೂಜ್ಯಲಿಂ. ವಿರುಪಾಕ್ಷಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯಸ್ಮರಣೆಯ ದಶಮಾನೋತ್ಸವದ ಧರ್ಮ ಸಭೆ ಹಾಗೂ ಧರ್ಮ ಜನಜಾಗೃತಿ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ವೀರಸಂಗಮೇಶ್ವರ ಶ್ರೀಗಳು ಆಶೀರ್ವಚನ ನೀಡುತ್ತಾ ಜಗತ್ತಿನ ಕಲ್ಯಾಣಕ್ಕಾಗಿ ಧರ್ಮ ಜಾಗೃತಿ ಅಭಿಯಾನವನ್ನು ಹಮ್ಮಿಕೊಂಡಿದ್ದೇವೆ ಇದು 47ನೇ ಜಾಗೃತಿ ಕಾರ್ಯಕ್ರಮವಾಗಿದೆ ಎಂದರು.




ಸನಾತನ ಭವ್ಯ ಪರಂಪರೆಯನ್ನು ಕೈ ಬಿಡಬೇಡಿ ನಿಮ್ಮ ಮಕ್ಕಳ ಭವಿಷ್ಯ ಉಜ್ವಲಕ್ಕೆ ಲಿಂಗ, ರುದ್ರಾಕ್ಷಿ, ವಿಭೂತಿಯನ್ನು ಹಚ್ಚುವಂತೆ ಪ್ರೇರೆಪಿಸಿರಿ, ಇದರಲ್ಲಿ ವೈಜ್ಞಾನಿಕ ಸತ್ಯ ಅಡಗಿದೆ, ಗುರುವಿನ ಕೃಪೆ ಎಲ್ಲರ ಮೇಲೆ ಇರಬೇಕೆಂದು ಚಳಗೇರಾ ಶ್ರೀಗಳು ಹೇಳಿದರು.

ವಿಶೇಷ ಉಪನ್ಯಾಸಕರಾಗಿ ಕಮತಗಿಯ ಗಣೇಶ ಶಾಸ್ತ್ರಿ ಮಾತನಾಡುತ್ತಾ ಅಪಾರ ಭಕ್ತರ ಸಂಕುಲವನ್ನು ಲಿಂ.ವಿರುಪಾಕ್ಷಲಿಂಗ ಶ್ರೀಗಳು ಹೊಂದಿದ್ದರು ಎಂದು ಪೂಜ್ಯರ ಪವಾಡಗಳನ್ನು ಕುರಿತು ಮಾತನಾಡಿದರು ಜಿ. ಆರ್. ಕೋಟಿ, ಜಗದೀಶ ಗಿರಡ್ಡಿ, ಡಾ. ಚಂದ್ರು ಕಂಬಳಿ ಮೊದಲಾದವರು ಮಾತನಾಡಿದರು.

ಸಾನಿಧ್ಯ ವಹಿಸಿದ್ದ ದೋಟಿಹಾಳ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು ಸಂಸ್ಕೃತಿ-ಸಂಸ್ಕಾರ ಭಾರತದಲ್ಲಿ ಮಾತ್ರ ಇದೆ ಅದನ್ನು ಕಲಿಯಲು ವಿದೇಶದವರು ಭಾರತ-ಕ್ಕೆ ಬರುತ್ತಾರೆ ಎನ್ನುತ್ತಾ ಧರ್ಮವನ್ನು ಬೆಳಗಿಸುವ ಕಾರ್ಯವನ್ನು ಚಳಗೇರಿಯ ಪೂಜ್ಯ ವೀರ ಸಂಗಮೇಶ್ವರ ಶಿವಾಚಾರ್ಯರು 21ನೇ ಶತಮಾನದಲ್ಲಿ ಮಾಡುತ್ತಿದ್ದಾರೆ ಎಂದರು.

ಶ್ರೀ ಸಿದ್ಧಿ ವಿನಾಯಕ ಸೇವಾ ಸಮಿತಿಯ ಅಧ್ಯಕ್ಷ ಶರಣು ಸರಗಣಾಚಾರಿ, ನಗರಸಭೆ ಅಧ್ಯಕ್ಷೆ ಸುಧಾರಾಣಿ ಸಂಗಮ, ಇಳಕಲ್ ಅರ್ಬನ್ ಬ್ಯಾಂಕ್ ನಿರ್ದೇಶಕ ಮಲ್ಲಿಕಾರ್ಜುನ ಅಗ್ನಿ, ಬಾಗಲಕೋಟೆ ಜಿ.ಪಂ. ಮಾಜಿ ಅಧ್ಯಕ್ಷ ಹನುಮಂತಪ್ಪ ರಾಠೋಡ, ಬಸವರಾಜ ರೇವಡಿ ಮೊದಲಾದವರು ವೇದಿಕೆಯಲ್ಲಿದ್ದರು.

ವೀರೇಶ ಯಡ್ರಾಮಿ ಪ್ರಾರ್ಥಿಸಿದರು. ವಿಜಯಕುಮಾರ ಹಿರೇಮಠ ಮತ್ತು ಸಂಗಡಿಗರಿಂದ ವೇದ ಘೋಷ, ಪ್ರಾಧ್ಯಾಪಕ ಬಿ.ಸಿ. ತುಂಬಗಿ ಸ್ವಾಗತಿಸಿದರು, ಪ್ರಾಚಾರ್ಯ ಎಸ್. ವ್ಹಿ. ಕಂಬಿ ನಿರೂಪಿಸಿದರು, ಡಾ. ಎಸ್. ಹೆಚ್. ಅಂಗಡಿ ವಂದಿಸಿದರು.

## ಬದುಕು

"~~ಓ ಶಿವನೆ ನಿನ್ನಾಟವ ಬಲ್ಲವರಾರು
ಬದುಕೆಂಬುದುಮೂರುದಿನದಸಂತೆಜೀವವೆಂಬುದುಸುಖ-ದುಃಖ್ಖಗಳ
ಸಾಗರ ಬರುವ ಅಲೆ-ತೆರೆಗಳಿಗೆ ಎದೆಯೊಡ್ಡಿ ನಿಲ್ಲುವುದೇ ಸತ್ಯ

ಬೇಡವಾದಾಗ ಮುಟಿಗೆ ಮಾಡಿ ಭೂಮಿಗೆ ಬಿಸಾಕುವೆ
ಬೇಕಾದಾಗ ಕೈ ಬೀಸಿ ಕರೆಯುವೆ
ಎಲ್ಲ ವಿಜ್ಞಾನಿಗಳು ಏನೆಲ್ಲಾ ತಂತ್ರಗಳನ್ನು ಕಂಡು ಹಿಡಿದ್ರು
ಆದ್ರೆ ನಿನ್ನಾಟವ ಕಂಡು ಹಿಡಿಯಲು ಯಾವ ಯಂತ್ರವು ಸಿಗಲಿಲ್ಲ
ಕೊನೆಗೆ ನಿನ್ನಾಟ ಎಂದ್ರು
ಅದಕ್ಕೆ ಅಲ್ವೆ ನೀನು ದೇವರು ಎನಿಸಿಕೊಂಡಿದ್ದು

ಭೂಮಿ ಬಗೆದಾಗೆಲ್ಲಾ ನೀರು, ಕರುಳ ಅಗೆದಾಗೆಲ್ಲಾ ಕಣ್ಣೀರು
ನೀನಿರುವುದೇ ಆದರೆ ನಾನು ಹೇಳುವುದೆಲ್ಲವಾ ಕೇಳಿದ್ದೆಯಾದರೆ
ಚಿರನಿದ್ರೆಗೆ ಜಾರಿದ ಮಕ್ಕಳ ತಾಯಂದಿರ
ಕರುಳನ್ನೊಮ್ಮೆ ಬಗೆದು ನೋಡು
ಅಲ್ಲಿ ಏನಿಲ್ಲ ಬರೀ ...... ಕಣ್ಣೀರು.

ದ್ವಾಪರಯುಗ, ಕಲಿಯುಗ, ಸತ್ಯಯುಗ, ಎಂದು ಇರುವುದಾದರೆ
ಆ ಕರುಳುಗಳಿಗೆ ಸಾಂತ್ವನ ಕೊಡು
ಚಿರನಿದ್ರೆಗೆ ಜಾರಿದ ಮಕ್ಕಳಿಗೆ
ಇನ್ನೊಂದು ಜನ್ಮವೊಂದಿದ್ದರೆ
ಪುಣ್ಯ ತಾಣದಲ್ಲಿ ಜನ್ಮ ನೀಡು. "~~"

। ಶ್ರೀಮತಿ ನೀಲಮ್ಮ ಚಂ. ರೇವಡಿ
**ಸರಕಾರಿ ಪ್ರೌಢಶಾಲೆ, ಮರೋಳ.**



**ಮೂಡಲಗಿ : ಕರ್ನಾಟಕದ ಹೆಮ್ಮೆಯ ವೀರ ವನಿತೆ ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟೀಷರ ವಿರುದ್ಧ ನಡೆಸಿದ 1824ರ ಸ್ವಾತಂತ್ರ್ಯ ಸಂಗ್ರಾಮದ 200 ನೇ ವರ್ಷದ ವಿಜಯೋತ್ಸವದ ಅಂಗವಾಗಿ ದೆಹಲಿಯ ಸಂಸತ ಭವನದ ಆವರಣದಲ್ಲಿ ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರು ರಾಣಿ ಚೆನ್ನಮ್ಮನ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಿದರು.**
**ಈ ಸಂದರ್ಭದಲ್ಲಿ ಲೋಕಸಭೆಯ ಸಭಾಪತಿಗಳಾದ ಓಂ ಬಿರ್ಲಾ, ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ, ರೈಲ್ವೆ ಇಲಾಖೆ ರಾಜ್ಯ ಸಚಿವ ವಿ. ಸೋಮಣ್ಣ, ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ, ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ , ಅರವಿಂದ ಬೆಲ್ಲದ ಸೇರಿದಂತೆ ದೆಹಲಿ ಕರ್ನಾಟಕ ಸಂಘದ ಪ್ರಮುಖರು ಹಾಗೂ ಚೆನ್ನಮ್ಮನ ಅಭಿಮಾನಗಳು ಉಪಸ್ಥಿತರಿದ್ದರು.**

### 6ನೇ ಕಾಲುಬಾಯಿ ರೋಗ ಲಸಿಕಾ ಅಭಿಯಾನಕ್ಕೆ ಚಾಲನೆ

# 'ಜಾನುವಾರುಗಳಿಗೆ ಕಾಲುಬಾಯಿ ರೋಗಲಸಿಕೆ ಹಾಕಿಸಿ ರೋಗಮುಕ್ತಗೊಳಿಸಬೇಕು'-ಹೆಗ್ಗನಾಯಿಕ



**ಮೂಡಲಗಿ :** 'ಜಾನುವಾರುಗಳಿಗೆ ಕಾಲುಬಾಯಿ ರೋಗವನ್ನು ನಿಯಂತ್ರಣ ಮಾಡಲು ಪ್ರತಿ ಆರು ತಿಂಗಳಿಗೊಮ್ಮೆ ಲಸಿಕೆ ಹಾಕಿಸಬೇಕು. ಉಚಿತವಾಗಿ ಎಲ್ಲ ದನ ಕರುಗಳಿಗೆ ನೀಡಲಾಗುತ್ತಿದ್ದು ರೈತರು ಸದುಪಯೋಗಪಡಿಸಿಕೊಳ್ಳಬೇಕು' ಎಂದು ಬೆಳಗಾವಿಯ ಜಿಲ್ಲಾ ಪಂಚಾಯತ ಆಡಳಿತ ಉಪಕಾರ್ಯದರ್ಶಿ ಬಸವರಾಜ ಹೆಗ್ಗನಾಯಿಕ ಹೇಳಿದರು,

ಇಲ್ಲಿಯ ಶ್ರೀ ಶಿವಬೋಧರಂಗ ಮಠದ ಗೋವು ಶಾಲೆಯಲ್ಲಿ ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಕರ್ನಾಟಕ ಸಹಕಾರಿ ಹಾಲು ಉತ್ಪಾದರಕ ಮಹಾಮಂಡಳ ಸಹಯೋಗದಲ್ಲಿ ರಾಷ್ಟ್ರೀಯ ಜಾನುವಾರ ರೋಗಗಳ ನಿಯಂತ್ರಣ ಯೋಜನೆ ಅಡಿ ಹಸುವಿಗೆ ಕಾಲುಬಾಯಿ ರೋಗ ಲಸಿಕೆ ಅಭಿಯಾನಯನ್ನು ಲಸಿಕೆ ನೀಡುವುದರ ಮೂಲಕ ತಾಲ್ಲೂಕಿನಲ್ಲಿ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು ರೋಗಗಳಿಂದ ಪೂರ್ಣ ಸುರಕ್ಷತೆಗಾಗಿ ಮೂರು ತಿಂಗಳ ಮೇಲ್ಪಟ್ಟ ಎಲ್ಲಾ ಜಾನುವಾರುಗಳಿಗೆ ಲಸಿಕೆಯನ್ನು ಹಾಕಿಸಬೇಕು ಎಂದರು.

ಪಶು ಪಾಲನಾ ಇಲಾಖೆಯಿಂದ ಜರುಗುತ್ತಿರುವ 'ಜಾನುವಾರುಗಳಿಗೆ ಕಾಲುಬಾಯಿ ರೋಗ ಲಸಿಕೆಯನ್ನು ಹಾಕಿಸಿ ರೋಗಮುಕ್ತಗೊಳಿಸಬೇಕು' ಮೂಡಲಗಿಯ ಶ್ರೀ ಮಠದ ಪೂಜ್ಯರ ಆಶಿರ್ವಾರದಿಂದ ಸಕಲ ಜೀವಾತ್ಮಗಳು ಆರೋಗ್ಯವಾಗಿರಬೇಕು ಎಂದು ಮೂಡಲಗಿಯ ಪಶು ಆಸ್ಪತ್ರೆಯ ಸಹಾಯಕ ನಿರ್ದೇಶಕ ಡಾ. ಮೋಹನ ಕಮತ ಹೇಳಿದರು.

ಪಶು ಸಂಗೋಪನಾ ಇಲಾಖೆಯಪಾಲಿ ಕ್ಲಿನಿಕ್ ಉಪನಿರ್ದೇಶಕ ಡಾ. ಎಂ.ಬಿ. ವಿಭೂತಿ, ಜಿಲ್ಲಾ ಪಂಚಾಯತ ಸಿಇಓ ಎಫ್ ಜಿ ಚಿನ್ನನವರ ವವ್ಯಸ್ಥಾಪಕ ಸಂಗಮೇಶ ರೊಡ್ಡನ್ನವರ, ಡಾ. ಮಹಾದೇವಪ್ಪ ಕೌಜಲಗಿ, ಸುರೇಶ ಆದಪ್ಪಗೋಳ, ಮಹಾಂತೇಶ ಹೊಸೂರ, ಶಿವಶಂಕರ ಶಾಬಣ್ಣವರ, ಸರಸ್ವತಿ ಮುರಗೋಡ ಪಶು ಸಖಿಯರಾದ ನಿರ್ಮಲಾ, ಪೂಜಾ ಇದ್ದರು.


## ವಿಶ್ವವಿದ್ಯಾಲಯ ಬ್ಲೂ ಆಯ್ಕೆ



**ಮಹಾಲಿಂಗಪುರ :** ಪಟ್ಟಣದ ಕೆಎಲ್ಇ ಸಂಸ್ಥೆಯ ಎಸ್‌ಸಿಪಿ ಪದವಿ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿ ವಿನಾಯಕ ಬಟ್ಟಲ, ಶೆಟಲ್ ಬ್ಯಾಡ್ಮಿಂಟನ್‌ನಲ್ಲಿ ವಿಶ್ವವಿದ್ಯಾಲಯದ ಬ್ಲೂ ಆಗಿ ಆಯ್ಕೆಯಾಗಿದ್ದಾರೆ.

ಜಮಖಂಡಿಯ ಬಿಎಲ್‌ಡಿಇ ಕಾಲೇಜಿನಲ್ಲಿ ಬಾಗಲಕೋಟೆ ವಿಶ್ವವಿದ್ಯಾಲಯ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಶೆಟಲ್ ಬ್ಯಾಡ್ಮಿಂಟನ್ ಆಯ್ಕೆ ಪ್ರಕ್ರಿಯೆಯಲ್ಲಿ ವಿನಾಯಕ ಬಟ್ಟಲ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಾಚಾರ್ಯ ಕೆ.ಎಂ.ಅವರಾದಿ ತಿಳಿಸಿದ್ದಾರೆ.

## ರಾಚಪ್ಪ ಅಮರಪ್ಪ ಹಂದ್ರಾಳ ನಿಧನ



**ಮಹಾಲಿಂಗಪುರ :** ಪಟ್ಟಣದ ಬಸವನಗರ ನಿವಾಸಿ, ಕುರುಹಿನಶೆಟ್ಟಿ ಸಮಾಜದ ರಾಚಪ್ಪ ಅಮರಪ್ಪ ಹಂದ್ರಾಳ(74) ಬುಧವಾರ ರಾತ್ರಿ ನಿಧನರಾದರು.ಮೃತರು ಪತ್ನಿ, ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಸಂತ್ರಸ್ಥ ಠೇವಣಿದಾರರಿಂದ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಯತ್ನ: ಬಂಧನ-ಬಿಡುಗಡೆ



**ವಿಜಯಪುರ :** ಪಿಎಸ್‌ಐಎಲ್ ಸೇರಿದಂತೆ ಹಲವು ಕಂಪನಿಗಳಲ್ಲಿ ಗ್ರಾಹಕರು ಹೂಡಿಕೆ ಮಾಡಿದ ಹಣ ಮರುಪಾವತಿಗೆ ಆಗ್ರಹಿಸಿ ನಗರದ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ಮುಂದಾದ ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದರು. ಇಲ್ಲಿನ ಡಿಸಿ ಕಚೇರಿ ಮುಂಭಾಗದಲ್ಲಿ ಟಿಪಿಜೆಪಿ ಪೌಡರ್ ನೇತೃತ್ವದಲ್ಲಿ ಠೇವಣಿದಾರ ಸಂತ್ರಸ್ಥರು ಕಳೆದ 53 ದಿನಗಳಿಂದ ಅನಿರ್ಧಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದು, ಜಿಲ್ಲಾಧಿಕಾರಿಗಳು ಹಾಗೂ ಸರ್ಕಾರ ಸ್ಪಂದಿಸಿಲ್ಲ ಎಂದು ಜೈಲ್ ಭರೋ ಆಂದೋಲನದ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ಸಾವಿರಾರು ನೊಂದ ಗ್ರಾಹಕರು ಮುಂದಾಗಿದ್ದ ವೇಳೆ, ಹೋರಾಟದ ಪ್ರಮುಖರನ್ನು, ಮಹಿಳಾ ಠೇವಣಿದಾರರನ್ನು ಪೊಲೀಸರು ವಶಕ್ಕೆ ಪಡೆದು ವಾಹನದ ಮೂಲಕ ಕರೆದೊಯ್ದು ಬಿಡುಗಡೆ ಮಾಡಿದರು.ಕೇಂದ್ರಸರ್ಕಾರಕಂಪನಿಮುಟ್ಟುಗೋಲು ಹಾಕಿಕೊಂಡಆಸ್ತಿಹರಾಜುಮಾಡಿನೊಂದಗ್ರಾಹಕರಿಗೆ ಹಣ ಕೊಡುತ್ತಿಲ್ಲ. ದೇಶದಲ್ಲಿ ಅಂದಾಜು 42 ಕೋಟಿ ಗ್ರಾಹಕರಿದ್ದು, 185 ಕಂಪನಿಗಳ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಅಂತಹ ಕಂಪನಿಗಳಲ್ಲಿ ಗ್ರಾಹಕರು ಹೂಡಿಕೆ ಮಾಡಿದ ಹಣಕ್ಕಾಗಿ ಅಲೆದಾಡುವಂತಾಗಿದೆ. ಖಾಸಗಿ ಕಂಪನಿಗಳ ಖಾತೆ, ಆಸ್ತಿಯನ್ನು ಹರಾಜು ಮಾಡಿ ಗ್ರಾಹಕರಿಗೆ ಹಣ ಕೊಡುವ ವ್ಯವಸ್ಥೆ ಆಗಬೇಕಿದೆ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಹೋರಾಟಗಾರರು,ಜಿಲ್ಲಾಧಿಕಾರಿಕಚೇರಿಮುಂಭಾಗದ ರಸ್ತೆಗೆ ಬ್ಯಾರಿಕೇಡ್ ಹಾಕಿ, ರಸ್ತೆ ಸಂಚಾರ ಬಂದ್ ಮಾಡಲಾಗಿತ್ತು. ನೊಂದ ಗ್ರಾಹಕರ ಹೋರಾಟಕ್ಕೆ ರೈತ ಸಂಘಟನೆಗಳು ಬೆಂಬಲ ನೀಡಿದ್ದವು.

ಈ ವೇಳೆ ಜಿಲ್ಲಾ ಉಪಾಧ್ಯಕ್ಷ, ಸಿದ್ದಣ್ಣ ಹಡಲಗೇರಿ, ಕಾರ್ಯದರ್ಶಿ ರಾಜಶೇಖರ ದೊಡಮನಿ, ಬಾಬು ಪಟೇಲ್, ಮಂಜುಕುಮಾರ ಕಾಂಬಳೆ, ರಾಮಚಂದ್ರ ಮಹೀಂದ್ರಕರ ಮತ್ತಿತರ ಗ್ರಾಹಕರಿದ್ದರು. ಹೆಚ್ಚುವರಿ ಎಸ್ಪಿ ಶಂಕರ್ ಮಾರಿಹಾಳ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

# ಕಾಂಗ್ರೆಸ್ ಪಕ್ಷ ಬಡವರ ಕಲ್ಯಾಣಕ್ಕಾಗಿ ಶ್ರಮಿಸುತ್ತಿದೆ: ಮದರಕಲ್ಲ

**ತಾಳಿಕೋಟೆ :** ಕಾಂಗ್ರೆಸ್ ಪಕ್ಷವು ಸದಾ ದುಡಿಯುವ ಕೈಗಳಿಗೆ ಕೆಲಸ ಕೊಡುವದರೊಂದಿಗೆ ಅವರ ಏಳಿಗೆ ಬಯಸುತ್ತಾ ಸಾಗಿಬಂದಿದೆ ಸದ್ಯ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಬಡ ಬಗ್ಗರ, ದೀನ ದಲಿತರ, ಅಲ್ಲದೇ ಬೀದಿಬದಿ ವ್ಯಾಪಾರಿಗಳ ಕಲ್ಯಾಣಕ್ಕಾಗಿ ಶ್ರಮಿಸುತ್ತಿದ್ದು ಸರ್ಕಾರವು ವಿವಿಧ ರೀತಿಯ ಯೋಜನೆಗಳ ಮೂಲಕ ಸಹಾಯಕ್ಕೆ ಬರಲಿದೆ ಎಂದು ಪುರಸಭಾ ಮಾಜಿ ಸದಸ್ಯ ಕಾಂಗ್ರೆಸ್ ಪಕ್ಷದ ಮುಖಂಡ ಪ್ರಭುಗೌಡ ಮದರಕಲ್ಲ ಅವರು ಹೇಳಿದರು.



ಮಂಗಳವಾರರಂದು ಪಟ್ಟಣದ ಶ್ರೀ ನೀಲಕಂಠೇಶ್ವರ ಸಭಾ ಭವನದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಬೀದಿಬದಿ ವ್ಯಾಪಾರಿಗಳ ವಿಭಾಗದ ತಾಳಿಕೋಟೆ ತಾಲೂಕಾ ಘಟಕದ ವಿವಿಧ ಪದಾಧಿಕಾರಿಗಳಿಗೆ ಆದೇಶ ಪತ್ರ ವಿತರಣಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತಿದ್ದ ಅವರು ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಸ್ಥಳೀಯ ಸಂಸ್ಥೆಗಳಲ್ಲಿಯೂ ಬೀದಿಬದಿ ವ್ಯಾಪ್ಯಾರಿಗಳ ಅನುಕೂಲಕ್ಕಾಗಿ ಯೋಜನೆಗಳನ್ನು ರೂಪಿಸಿದೆ ಇದರಿಂದ ಅನೇಕ ಬಡ ಬೀದಿ ಬದಿ ವ್ಯಾಪಾರಸ್ಥರು ದುಡಿಮೆಯನ್ನು ಮಾಡಿ ಜೀವನ ಸಾಗಿಸುತ್ತಿದ್ದಾರೆ ಬೀದಿ ಬದಿ ವ್ಯಾಪಾರಸ್ಥರು ಒಗ್ಗಟ್ಟಾಗಿ ಕೆಲಸದಲ್ಲಿ ತೊಡಗಿಕೊಳ್ಳಬೇಕು ಯಾರಿಗೆ ಸಮಸ್ಯ ಬಂದರೂ ಎಲ್ಲರೂ ಒಂದೇ ಎಂಬ ಭಾವನೆಯೊಂದಿಗೆ ಸಂಘಟನಾತ್ಮಕವಾಗಿ ನಿಂತುಕೊಳ್ಳಬೇಕು ಬೀದಿ ಬದಿ ವ್ಯಾಪಾರಸ್ಥರು ಕಾಂಗ್ರೆಸ್ ಪಕ್ಷದ ಬಲವರ್ದನೆಗೆ ಶ್ರಮಿಸುವದರೊಂದಿಗೆ ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಬೇಕೆಂದರು.

ಇನ್ನೋರ್ವ ಕೆಪಿಸಿಸಿ ಬೀದಿ ಬದಿ ವ್ಯಾಪಾರಿಗಳ ವಿಭಾಗದ ಜಿಲ್ಲಾ ಅಧ್ಯಕ್ಷ ಲಾಲಸಾಬ ಕೊರಬು ಮಾತನಾಡಿ ಬೀದಿ ಬದಿ ವ್ಯಾಪಾರಸ್ಥರು ಯಾವಾಗಲೂ ಒಗ್ಗಟ್ಟಾಗಿರಬೇಕು ಕಾಂಗ್ರೆಸ್ ಪಕ್ಷವು ಬಡವರಿಗಾಗಿ ಕೆಲಸ ಮಾಡುತ್ತಾ ಬಂದಿದೆ ಸರ್ಕಾರದಿಂದ ಯಾವುದೇ ಕೆಲಸ ಕಾರ್ಯಗಳು ಆಗಬೇಕಾದರೆ ಒಬ್ಬರಿಂದ ಸಾದ್ಯವಿಲ್ಲಾ ಎಲ್ಲರ ದ್ವನಿ ಒಂದಾದಾಗ ಮಾತ್ರ ಕೆಲಸ ಕಾರ್ಯಗಳು ಆಗಲು ಸಾದ್ಯವಿದೆ ಸರ್ಕಾರದಿಂದ ಬೀದಿ ಬದಿ ವ್ಯಾಪಾರಿಗಳಿಗಾಗಿ ನಿಗಮ ಸ್ಥಾಪನೆ ಮಾಡಲು ಒತ್ತಡವನ್ನು ಮುಖ್ಯಮಂತ್ರಿಗಳ ಮೇಲೆ ಹಾಕಿದ್ದೇವೆ ಕೂಡಲೇ ಬೀದಿ ಬದ ವ್ಯಾಪಾರಿಗಳಿಗೆ ಅನುಕೂಲ ಕಲ್ಪಿಸುವ ರೀತಿಯಲ್ಲಿ ಯೋಜನೆಗಳನ್ನು ರೂಪಿಸುವದಾಗಿ ತಿಳಿಸಿದ್ದಾರೆಂದರು.

ಇನ್ನೋರ್ವ ಕೆಪಿಸಿಸಿ ಬೀದಿಬದಿ ವ್ಯಾಪಾರಿಗಳ ವಿಭಾಗದ ರಾಜ್ಯ ಉಪಾಧ್ಯಕ್ಷ ಪೌವಾಡೆಪ್ಪ ಚಲವಾದಿ ಅವರು ಮಾತನಾಡಿ ಸರ್ಕಾರದ ಸೌಲತ್ತುಗಳು ಸಿಗಬೇಕಾದರೆ ನಾವೇಲ್ಲರೂ ಸಂಘಟಿ-ತರಾದಾಗ ಮಾತ್ರ ಸಾದ್ಯವಾಗುತ್ತದೆ ಎಲ್ಲರೂ ಕಾಂಗ್ರೆಸ್ ಪಕ್ಷದ ಬೀದಿಬದಿ ವ್ಯಾಪಾರಿಗಳ ವಿಭಾಗದಲ್ಲಿ ಸಕ್ರೀಯವಾಗಿ ಕೆಲಸದಲ್ಲಿ ತೊಡಗಿಕೊಳ್ಳುವದರೊಂದಿಗೆ ಸರ್ಕಾರದ ಯೋಜನೆಗಳ ಲಾಭವನ್ನು ಪಡೆದುಕೊಳ್ಳಬೇಕೆಂದರು.

ಇನ್ನೋರ್ವ ಕೆಪಿಸಿಸಿ ಬೀದಿಬದಿ ವ್ಯಾಪಾರಿಗಳ ವಿಭಾಗದ ತಾಳಿಕೋಟೆ ಬ್ಲಾಕ್ ಅಧ್ಯಕ್ಷ ಅಬ್ದುಲ್‌ಲತೀಪ ಬೀಳಗಿ ಮಾತನಾಡಿ ಸಂಘಟನೆ ಭಲವಾಗಿ ಬೆಳೆಯಬೇಕೆಂದರೆ ಎಲ್ಲರ ಸಹಕಾರವು ಅಗತ್ಯವಾಗಿದೆ ಸರ್ಕಾರದ ಸೌಲತ್ತು ಗಳು ಸಿಗಬೇಕಾದರೆ ಸಂಘಟನಾ ಮುಖ್ಯಸ್ಥರ ಮಾತಿಗೆ ಬೆಲೆ ನೀಡುವಂತಾಗಬೇಕು ಅಂದಾಗ ಸರ್ಕಾರದ ಸೌಲತ್ತಗಳನ್ನು ಎಲ್ಲ ಬೀದಿ ಬದಿ ವ್ಯಾಪಾರಿಗಳಿಗೆ ಒದಗಿಸಲು ಸಾದ್ಯವಾಗಲಿದೆ ನೂತನವಾಗಿ ಅಸ್ಥಿತ್ವಕ್ಕೆ ಬಂದಿರುವ ಕೆಪಿಸಿಸಿ ಬೀದಿ ಬದಿ ವ್ಯಾಪಾರಿಗಳ ವಿಭಾಗದ ಸಂಘಟನೆಗೆ ಎಲ್ಲರೂ ಒತ್ತು ನೀಡಬೇಕೆಂದರು.

ಇದೇ ಸಮಯದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಬೀದಿ ಬದಿ ವ್ಯಾಪಾರಿಗಳ ವಿಭಾಗ ತಾಳಿಕೋಟೆ ತಾಲೂಕಾ ವಿವಿಧ ವಿಭಾಗಗಳಿಗೆ ನೇಮಕಗೊಂಡ ಪದಾಧಿಕಾರಿಗಳಿಗೆ ಆದೇಶ ಪತ್ರವನ್ನು ವಿತರಿಸಲಾಯಿತು.

ತಾಳಿಕೋಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೈಹಿಬೂಬ ಚೋರಗಸ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಈ ಸಮಯದಲ್ಲಿ ಬೀದಿ ಬದಿ ವ್ಯಾಪಾರಿಗಳ ಒಕ್ಕೂಟದ ತಾಳಿಕೋಟೆ ತಾಲೂಕಾ ಅಧ್ಯಕ್ಷ ಜುಮ್ಮಣ್ಣ ನಾಲತವಾಡ, ಸಿದ್ದನಗೌಡ ಪಾಟೀಲ(ನಾವದಗಿ), ಎಚ್. ಎಚ್.ಚೌದ್ರಿ, ಎಲ್.ಎಚ್.ಚೌದ್ರಿ, ಎ.ಆರ್. ಆನೇಸೂರ, ಎನ್.ಎಂ.ಜಾಲಿಬೆಂಚಿ, ನಾನೇಶ ಹಿಂಗಮೋರೆ, ಬಾಬಾಸಾಬ ಚೌದ್ರಿ, ಸಂತೋಷ ಇಲಕಲ್ಲ, ಅಕ್ಬರ ಕೂಡಗಿ, ಮುದ್ದೇಬಿಹಾಳ ಬೀದಿಬದಿ ವ್ಯಾಪಾರಿಗಳ ವಿಭಾಗದ ಬ್ಲಾಕ್ ಅಧ್ಯಕ್ಷ ಮೈಹಿಬೂಬ ಕುಳಗೇರಿ, ಮೈಹಿಬೂಬ ಜಾಹಗೀರದಾರ, ಹುಸೇನಸಾಬ ನಾಲತವಾಡ, ಶಾಂತಪ್ಪ ಜಮ್ಮಲದಿನ್ನಿ, ಇಲಿಯಾಸ ಚೌದ್ರಿ, ಎಂ.ಎಚ್.ಚೌದ್ರಿ, ಮೊದಲಾದವರು ಇದ್ದರು.

# ಎಸ್.ಎಸ್. ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಆರತಿ ಜೂಡೋ ಕ್ರೀಡೆಯಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆ



**ವಿಜಯಪುರ :** ಶಾಲಾ ಶಿಕ್ಷಣ ಇಲಾಖೆ( ಪದವಿ ಪರ್ವ ಇಲಾಖೆ ) ಬೆಂಗಳೂರು ವತಿಯಿಂದ ಚಿತ್ರದರ್ಗ ಜಿಲ್ಲೆಯಲ್ಲಿ ನಡೆದ 2024- 25 ನೇ ಸಾಲಿನ ಪದವಿ ಪರ್ವ ಕಾಲೇಜುಗಳ ರಾಜ್ಯಮಟ್ಟದ ಜೂಡೋ ಕ್ರೀಡಾಕೂಟದಲ್ಲಿ ವಿಜಯಪುರದ ಎಸ್.ಎಸ್. ಪದವಿಪರ್ವ ಕಾಲೇಜಿನ ವಿದ್ಯರ್ಥಿನಿ ಆರತಿ ಸೊನ್ನದ ಭಾಗವಹಿಸಿ 52 ಕೆಜಿ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾಳೆ,

ಇನ್ನರ್ವ ವಿದ್ಯರ್ಥಿ ಸಂದೀಪ ಲಂಬಾಣಿ ರಾಜ್ಯ ಮಟ್ಟದಲ್ಲಿ ತೃತೀಯ ಸ್ಥಾನ ಪಡೆದಿದ್ದಾನೆ

ವಿದ್ಯರ್ಥಿಗಳ ಸಾಧನೆಗೆ ಬಿ.ಎಲ್.ಡಿ.ಈ ಸಂಸ್ಥೆಯ ಅಧ್ಯಕ್ಷ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಭೂತ ಸೌರ್ಯಗಳ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ

ಸಚಿವ ಡಾ. ಎಮ್.ಬಿ. ಪಾಟೀಲ, ಸಂಸ್ಥೆಯ ಪ್ರಧಾನ ಕರ್‍ಯರ್ಶಿ ಜಿ.ಕೆ. ಪಾಟೀಲ ಆಡಳಿತ ಅಧಿಕಾರಿಗಳಾದ ಬಿ.ಆರ್. ಪಾಟೀಲ, ಆಯ್.ಎಸ್. ಕಾಳಪ್ಪನವರ, ಕ್ರೀಡಾ ನರ್ದೇಶಕರುಗಳಾದ ಎಸ್. ಎಸ್. ಕೋರಿ, ಕೆ.ಜಿ. ಹಿರೇಮಠ, ಪ್ರಾಚರ್ಯ ಡಾ. ಜಿ.ಡಿ. ಅಕಮಂಚಿ, ದೈಹಿಕ ಉಪನ್ಯಾಸಕಿ ಅರುಣಾ ಮಾಲಿಂಗಪುರ ಹಾಗೂ ಸಮಸ್ತ ಸಿಬ್ಬಂದಿಗಳು ರ್ಷ ವ್ಯಕ್ತಪಡಿಸಿದ್ದಾರೆ.

# ಸಾರವಾಡ ವಿದ್ಯಾರ್ಥಿನಿಯ ಉನ್ನತ ವ್ಯಾಸಂಗಕ್ಕೆ ಸಚಿವ ಎಂ.ಬಿ. ಪಾಟೀಲ ಧನ ಸಹಾಯ

**ವಿಜಯಪುರ :** ನೀಟ್ ಪಾಸಾಗಿ ಸರಕಾರಿ ಕೋಟಾದಡಿ ಎಂ.ಬಿ.ಬಿ.ಎಸ್. ಸೀಟು ಪಡೆದರೂ ಶುಲ್ಕ ಭರಿಸಲಾಗದೆ ಆರ್ಥಿಕ ಸಮಸ್ಯೆ ಎದುರಿಸುತ್ತಿದ್ದ ವಿದ್ಯಾರ್ಥಿನಿಗೆ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷ ಎಂ. ಬಿ. ಪಾಟೀಲ ಸಹಾಯ ಹಸ್ತ ಚಾಚಿದ್ದು, ಕೋರ್ಸಿನ ಸಂಪೂರ್ಣ ವೆಚ್ಚವನ್ನು ಭರಿಸಲಿದ್ದಾರೆ.



ಬಬಲೇಶ್ವರ ತಾಲೂಕಿನ ಸಾರವಾಡ ಗ್ರಾಮದ ಭಾಗ್ಯಶ್ರೀ ದೇವರ ಎಂಬ ವಿದ್ಯಾರ್ಥಿನಿ ನೀಟ್ ಪರೀಕ್ಷೆಯಲ್ಲಿ 49707 ರ್‍ಯಾಂಕ್ ಪಡೆದಿದ್ದು, ಚಿಕ್ಕಬಳ್ಳಾಪುರ ಇನಸ್ಟಿಟ್ಯೂಟ್ ಆಫ್ ಸಾಯಿನ್ಸ್‌ನಲ್ಲಿ ವೈದ್ಯಕೀಯ ಸೀಟು ಪಡೆದಿದ್ದಾಳೆ. ಈ ವಿದ್ಯಾರ್ಥಿನಿಗೆ ಪೋಷಕರಿಗೆ ಸಂಸ್ಥೆಯ ವತಿಯಿಂದ ಎಂ.ಬಿ.ಬಿ.ಎಸ್. ಕೋರ್ಸಿನ ಮೊದಲ ವರ್ಷದ ಶೈಕ್ಷಣಿಕ ಶುಲ್ಕ, ಹಾಸ್ಟೆಲ್ ಮತ್ತು ಊಟದ ಖರ್ಚಿಗೆ ಅಗತ್ಯವಾಗಿರುವ ಪ್ರಥಮ ಕಂತಿನ ಹಣ 1,57,250 ರೂಪಾಯಿ ಚೆಕ್‌ನ್ನು ವಿಧಾನ ಪರಿ?ತ್ ಶಾಸಕ ಸುನೀಲಗೌಡ ಪಾಟೀಲ ಸೋಮವಾರ ವಿತರಿಸಿದರು.

ವಿದ್ಯಾರ್ಥಿನಿಯ ತಂದೆ ಶಂಕರ ಮತು ?ತತಾಯಿ ರಾಜೇಶ್ವರಿ ಅವರು ತಮ್ಮ ಮಗಳ ಪರವಾಗಿ ಚೆಕ್ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸುನೀಲಗೌಡ ಪಾಟೀಲ, ವಿದ್ಯಾರ್ಥಿನಿ ಭವಿಷ್ಯದಲ್ಲಿ ಉತ್ತಮ ವೈದ್ಯೆಯಾಗಿ ಹೆಸರು ಮಾಡಲಿ. ಅಲ್ಲದೇ, ಈ ಭಾಗದ ಬಡ ರೋಗಿಗಳ ಸೇವೆ ಮಾಡುವಂತಾಗಲಿ ಎಂದು ಶುಭ ಹಾರೈಸಿದರು.

ವಿದ್ಯಾರ್ಥಿನಿಯ ತಂದೆ ಶಂಕರದೇವರ ಮತ್ತು ತಾಯಿ ಜಯಶ್ರೀ ದೇವರ ಮಾತನಾಡಿ, ನಮ್ಮದು ಬಡ ಕುಟುಂಬ. ಮೊದಲ ಮಗ ವಿಶ್ವನಾಥ ಡಿಪ್ಲೋಮಾಓದುತ್ತಿದ್ದಾನೆ. ಎರಡನೇ ಪುತ್ರ ವಿನಾಯಕ ಪ್ರಥಮ ಪಿಯುಸಿ ಓದುತ್ತಿದ್ದಾನೆ. ಹೀಗಾಗಿ ನಮಗೆ ಮಗಳ ಕನಸು ನನಸು ಮಾಡಲು ಧನಸಹಾಯ ಮಾಡಿರುವ ಸಚಿವ ಎಂ. ಬಿ. ಪಾಟೀಲ ಮತ್ತು ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಅವರ ಉಪಕಾರವನ್ನು ಎಂದೂ ಮರೆಯುವುದಿಲ್ಲ ಎಂದು ಹೇಳಿದರು.

ನಮ್ಮ ಗೋಳು ಹೇಳಿಕೊಂಡಾಗ ಸಚಿವ ಎಂ. ಬಿ. ಪಾಟೀಲ ಮತ್ತು ಸುನೀಲಗೌಡ ಪಾಟೀಲ ಅವರು ಆಪತ್ಕಾಲದಲ್ಲಿ ನಮಗೆ ಆರ್ಥಿಕ ಸಹಾಯ ನೀಡುವ ಮೂಲಕ ನೆರವಾಗಿದ್ದಾರೆ. ಇದ-ರಿಂದ ನಮ್ಮ ಮಗಳು ವೈದ್ಯಳಾಗಬೇಕೆಂಬ ಕನಸು ನನಸು ಮಾಡಲು ಕಾರಣರಾಗಿದ್ದಾರೆ. ಅವರಿಗೆ ಚಿರಋಣಿಯಾಗಿದ್ದೇವೆ ಎಂದು ಹೇಳಿದರು.

# ಬೆಳೆಹಾನಿ ಪ್ರದೇಶಗಳಿಗೆ ಸಚಿವರ ಭೇಟಿ



**ಧಾರವಾಡ :** ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ಅವರು ಜಿಲ್ಲೆಯ ಅಮ್ಮಿನಭಾವಿ ಹೋಬಳಿಯ ಗ್ರಾಮಗಳಿಗೆ ಭೇಟಿ ನೀಡಿ, ಜಿಲ್ಲೆಯ ಮಳೆ ಹಾನಿ ಕುರಿತು ಹಾನಿಯಾದ ಮನೆಗಳಿಗೆ ಹಾಗೂ ಜಮೀನುಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

ಅವರು ರೈತರೊಂದಿಗೆ ಮಾತನಾಡಿ, ಬೆಳೆ ಹಾನಿ ಕುರಿತು ಪ್ರತಿ ರೈತರನ ಜಮೀನುಗಳನ್ನು ತಪ್ಪದೇ ನಿಖರವಾಗಿ ಸಮೀಕ್ಷೆ ಮಾಡಿ, ದಾಖಲಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸರ್ಕಾರಕ್ಕೆ ಜಿಲ್ಲೆಯ ಬೆಳೆ ಹಾನಿ ಕುರಿತು ವಿಶೇಷ ವರದಿ ಸಲ್ಲಿಸಿ, ಪರಿಹಾರ ಪಡೆಯಲು ಕ್ರಮವಹಿಸಲಾಗುವುದು ಎಂದರು.

ಈ ವಾರವೂ ಮಳೆ ಮುಂದುವರೆಯುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿ-ದ್ದು, ರೈತರಿಗೆ ಹಾಗೂ ಸಾರ್ವಜನಿಕರಿಗೆ ಆಗುವ ತೊಂದರೆಗಳನ್ನು ತಕ್ಷಣ ಪರಿಹರಿಸಲು ಮತ್ತು ಗ್ರಾಮಗಳಲ್ಲಿಯ ಸ್ಥಾನಿಕ ಅಧಿಕಾರಿಗಳಿದ್ದು, ಜನರಿಗೆ ನೆರವಾಗಲು ಸೂಚಿಸಲಾಗಿದೆ. ಬೆಳೆ ನಷ್ಟ ಕುರಿತು ಬೇಗ ವರದಿ ಸಿದ್ದಪಡಿಸಲು ಹಾಗೂ ವಿಮೆ ಮಾಡಿರುವ ರೈತರಿಗೆ ತಕ್ಷಣದ ಪರಿಹಾರ ಸಿಗುವಂತೆ ಕ್ರಮಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ನಿರ್ದೇಶಿಸಲಾಗಿದೆ ಎಂದು ಅವರು ಹೇಳಿದರು.

ತಹಶೀಲ್ದಾರ ಡಿ.ಎಚ್.ಹೂಗಾರ ಅವರು ಮಳೆಯಿಂದಾಗಿ ಗ್ರಾಮದಲ್ಲಿ ಒಟ್ಟು 14 ಮನೆಗಳು ಹಾನಿಯಾಗಿವೆ ಎಂದು ತಿಳಿಸಿದರು.

ಈರುಳ್ಳಿ ಬೆಳೆ ಹಾನಿ: ಅಕಾಲಿಕ ಮಳೆಯಿಂದಾಗಿ ಕೊಯ್ಲಿಗೆ ಬಂದಿದ್ದ ಅಮ್ಮಿನಭಾವಿ ಗ್ರಾಮದ ರೈತ ಬಸಪ್ಪ.ಧರ್ಮಪ್ಪ.ರಸಾಳೆ ಅವರ ಈರುಳ್ಳಿ ತೋಟ-ಕ್ಕೆ ಭೇಟಿ ನೀಡಿದ ಸಚಿವರು ಸ್ವತಃ ಈರುಳ್ಳಿ ಬೆಳೆ ಹಾಳಾಗಿರುವುದನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ರೈತ ಬಸಪ್ಪ ಮಾತನಾಡಿ, ತಮ್ಮ ಪಾಲಿಗೆ ಇರುವ ಎರಡು ಎಕರೆ ಜಮೀನುದಲ್ಲಿ ಮಳೆ ಆಶ್ರಿತ ಬೆಳೆಯಾಗಿ ಈರುಳ್ಳಿಯನ್ನು ಬೆಳೆದಿದ್ದೆನೆ. ಕೊಯ್ಲಿಗೆ ಬಂದ ಸಮಯದಲ್ಲಿ ಈ ಮಳೆಯಿಂದಾಗಿ ಭೂಮಿಯಲ್ಲಿಯೇ ಈರುಳ್ಳಿ ಕೊಳೆಯುತ್ತಿದೆ. ಇದ-ರಿಂದ ನನಗೆ ತುಂಬಾ ನಷ್ಟವಾಗಿದ್ದು, ಪರಿಹಾರ ದೊರಕಿಸಿಕೊಡುವಂತೆ ಸಚಿವರಲ್ಲಿ ಮನವಿ ಮಾಡಿದರು.

ಹತ್ತಿ ಬೆಳೆ ಹಾನಿ: ಅಮ್ಮಿನಭಾವಿ ಗ್ರಾಮದ ರೈತ ಮಹಿಳೆ ಫಕ್ಕಿರವ್ವಾ. ಮರಬಸಪ್ಪ. ಯಡಳ್ಳಿ ಅವರು ತಮ್ಮ ಎರಡು ಎಕರೆ ಜಮೀನುದಲ್ಲಿ ಬೆಳೆದಿಂದ ಹತ್ತಿ ಬೆಳೆ ಕೊಯ್ಲಿಗೆ ಬಂದಿದ್ದು, ಮಳೆಯಿಂದಾಗಿ ಗಿಡದಲ್ಲಿಯೇ ಹತ್ತಿ ಹಾಳಾಗಿದೆ. ಮುಂದಿನ ಬಿತ್ತನೆಗಾಗಿ ಸಹಾಯ ಮಾಡುವಂತೆ ತಮ್ಮ ಹತ್ತಿ ತೋಟಕ್ಕೆ ಭೇಟಿ ನೀಡಿದ್ದ ಸಚಿವರಲ್ಲಿ ವಿನಂತಿಸಿದರು.

# ವಿದ್ಯಾರ್ಥಿ ಚೇತನ ಆಯುಷ ಸೇವಾ ಕಾರ್ಯಕ್ರಮ



**ಧಾರವಾಡ :** ಸೈದಾಪೂರ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದಲ್ಲಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ, ಜಿಲ್ಲಾ ಆಯುಷ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಂಯೋಗದಲ್ಲಿ 2024-25 ನೇ ಸಾಲಿನ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಉಪಯೋಜನೆ (ಎಸ್‌ಸಿಎಸ್‌ಪಿ/ಟಿಎಸ್‌ಪಿ) ಅಡಿ ವಿದ್ಯಾರ್ಥಿ ಚೇತನ ಆಯುಷ ಸೇವಾ ಕಾರ್ಯಕ್ರಮಕ್ಕೆ ಜಿಲ್ಲಾ ಆಯುಷ್ಯ ಅಧಿಕಾರಿ ಡಾ. ಗಣೇಶ್ ಕಬಾಡೆ ಅವರು ಸಾಂಕೇತಿಕವಾಗಿ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಶಕ್ತಿವರ್ಧಕ ಖರ್ಜುರ ಪಾನಕ ಹಾಗೂ ಸಾಮಾನ್ಯ ವೈದ್ಯಕೀಯ ತಪಾಸಣೆ ಶಿಬಿರವನ್ನು ಜರುಗಿಸಲಾಯಿತು. ಬೆಂಗಳೂರಿನ ನಿಲಯಪಾಲಕ ವಿಜಯ, ವೈದ್ಯಾಧಿಕಾರಿಗಳಾದ ಡಾ. ಸಂತೋಷ ತಾಡಪತ್ರಿ,ಡಾ.ಆಶಾ ಎನ್.ಹಾಗೂ ಆಯುಷ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಜ್ಞಾನದ ಅನುಭವದಿಂದ ಆದರ್ಶ ಸಮಾಜ ಕಟ್ಟಲು ಸಾಧ್ಯ




**ಧಾರವಾಡ :** ಶಿಕ್ಷಕರು ಜ್ಞಾನದಅನುಭವದಿಂದ ಮಾತ್ರಆದರ್ಶ ಸಮಾಜಕಟ್ಟಲು ಸಾಧ್ಯ. ಅಂತಹ ಸೃಜನಶೀಲ ಶಿಕ್ಷಕರು ಜನಮಾನಸದಲ್ಲಿ ಶಾಶ್ವತವಾಗಿ ಉಳಿಯುತ್ತಾರೆ ಎಂದುಗ-'ದಗ ನಿವೃತ್ತಡಿ.ಪಿ.ಐ. ಎಂ.ಡಿ. ಬಳ್ಳಾರಿ ಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘವು ನಿಂಗಣ್ಣಕುಂಟಿ (ಇಟಗಿ) ದತ್ತಿ ಅಂಗವಾಗಿ ಆಯೋಜಿಸಿದ್ದ 'ನಿವೃತ್ತರಾಗಿಯೂ ಕ್ರೀಯಾಶೀಲರಾಗಿರುವ ಶಿಕ್ಷಕರಿಗೆ ಸನ್ಮಾನ'ಕಾರ್ಯಕ್ರಮದಲ್ಲಿಅತಿಥಿಯಾಗಿ ಮಾತನಾಡಿದರು.

ಇಂದು ಹಿಂದಿಗಿಂತಲೂ ಶಿಕ್ಷಕರ ಮೇಲೆ ಗುರುತರಜವಾಬ್ದಾರಿ ಬಹಳ ಇದೆ. ಇಂದಿನ ಸ್ಪರ್ಧಾತ್ಮಕಜಗತ್ತಿಗೆತಕ್ಕಂತೆ, ಭವಿಷ್ಯದ ಸವಾಲುಗಳನ್ನು ವಿದ್ಯಾರ್ಥಿಗಳು ಎದುರಿಸುವ ಸಾಮರ್ಥ್ಯಅವರಲ್ಲಿ ಶಿಕ್ಷಕರು ಬೆಳೆಸಬೇಕಿದೆ. ವಿದ್ಯಾರ್ಥಿಗಳಲ್ಲಿ ಗುಣಾತ್ಮಕತೆತರುವಲ್ಲಿ ಶಿಕ್ಷಕರಷ್ಟೇ ಅಲ್ಲ ಪಾಲಕರು ಹಾಗೂ ಸಮಾಜದ್ದು ಮಹತ್ವದ ಪಾತ್ರವಿದೆ.ನಿವೃತ್ತಿಯ ನಂತರ ಕ್ರೀಯಾಶೀಲರಾದ ಶಿಕ್ಷಕರು ಜನಮಾನಸದಲ್ಲಿ ಶಾಶ್ವತವಾಗಿರುತ್ತಾರೆ ಎಂದು ಹೇಳಿದರು. ನಿವೃತ್ತಡಿ.ಡಿ.ಪಿ.ಐ. ಎ.ಎನ್. ನಾಗರಳ್ಳಿ ಮಾತನಾಡಿ, ನಿಂಗಣ್ಣಕುಂಟಿ(ಇಟಗಿ),ಓರ್ವ ಸೃಜನಶೀಲ ಶಿಕ್ಷಕರಾಗಿ, ಮಕ್ಕಳ ಸಾಹಿತಿಗಳಾಗಿ ಕೃಷಿ ಮಾಡಿದವರು. ಅವರಜೀವಮಾನದ ಸಾಧನೆಗೆ ಬಡತನಅಡ್ಡಿ ಆಗಲಿಲ್ಲ. ಅವರು ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಶಿಕ್ಷಕರೂ ಕೂಡ.ಶಿಕ್ಷಕ ವೃತ್ತಿಧರ್ಮವನ್ನು ನಿವೃತ್ತಿ ನಂತರವೂಕಾಪಾಡಿಕೊಂಡುಇಂದು 4 ಜನ ನಿವೃತ್ತ ಕ್ರೀಯಾಶೀಲ ಶಿಕ್ಷಕರನ್ನು ಸನ್ಮಾನಿಸಿದ್ದು ಅಭಿನಂದನೀಯಎಂದರು.

ಶಿಕ್ಷಕ ಸಾಹಿತಿಜೆ.ಕೆ.ಜಮಾದಾರ ಮಾತನಾಡಿ, ಶಿಕ್ಷಕರು ತಮ್ಮ ವೃತ್ತಿಯಜೊತೆಗೆ ಒಳ್ಳೆಯ ಪ್ರವೃತ್ತಿಗಳನ್ನು ಬೆಳೆಸಿಕೊಂಡರೆ ಅಂತಹ ಶಿಕ್ಷಕರಿಗೆ ನಿವೃತ್ತಿಯೇಇಲ್ಲಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪ್ರೊ.ಮಾಲತಿ ಪಟ್ಟಣಶೆಟ್ಟಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಕ್ರೀಯಾಶೀಲ ಶಿಕ್ಷಕರಾದ ಬಸವರಾಜಜಗಾಪೂರ, ವೀಣಾ ಮೋಡಕ್, ಸಿ.ಎಸ್. ಮರಳಿಹಳ್ಳಿ ಅವರನ್ನುದತ್ತಿದಾನಿ ಪರವಾಗಿ ಕ.ವಿ.ವ ಸಂಘ ಸನ್ಮಾನಿಸಿ, ಗೌರವಿಸಿದರು.

ನಿಂಗಣ್ಣಕುಂಟಿ ದತ್ತಿಆಶಯಕುರಿತು ಮಾತನಾಡಿದರು.ಶಂಕರ ಕುಂಬಿ ಸ್ವಾಗತಿಸಿದರು.ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಡಾ. ಧನವಂತ ಹಾಜವಗೋಳ ವಂದಿಸಿದರು.

# ಪೊಲೀಸರ ಕರ್ತವ್ಯನಿಷ್ಠೆ ಶ್ಲ್ಯಾಘನೀಯ

**ಧಾರವಾಡ :** ಸಮಾಜದ ಆಂತರಿಕ ಭದ್ರತೆಯನ್ನು ಕಾಪಾಡುತ್ತಿರುವ ಮತ್ತು ಒತ್ತಡ ನಡುವೆಯೂ ಜನರ ಸುರಕ್ಷತೆಗೆಗಾಗಿ ಹಗಲಿರುಳೆನ್ನದೆ ಸೇವೆ ಸಲ್ಲಿಸುತ್ತಿರುವ ಪೊಲೀಸರ ಕರ್ತವ್ಯ ನಿಷ್ಠೆ ಶ್ಲಾಘನೀಯವಾಗಿದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಜಿ.ರಮಾ ಅವರು ಹೇಳಿದರು.




ಅವರು ಧಾರವಾಡ ಜಿಲ್ಲಾ ಪೊಲೀಸ್ ಇಲಾಖೆಯಿಂದ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಆಯೋಜಿಸಿದ್ದ ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಹುತಾತ್ಮರಾದ ಪೊಲೀಸ್‌ರ ಸ್ಮರಣೆಗಾಗಿ ಪೊಲೀಸ್ ಸ್ಮಾರಕಕ್ಕೆ ಪುಷ್ಪಗುಚ್ಛವಿರಿಸಿ, ಗೌರವ ನಮನ ಸಲ್ಲಿಸಿ, ಮಾತನಾಡಿದರು.

ನಿತ್ಯ ಒತ್ತಡದಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸ್ ಇಲಾಖೆ ಸಿಬ್ಬಂದಿ ತಮ್ಮ ಆರೋಗ್ಯ, ಕುಟುಂಬದ ಬಗ್ಗೆಯೂ ಗಮನಹರಿಸಬೇಕು. ಒಳ್ಳೆಯ ರೀತಿಯಲ್ಲಿ ಆರೋಗ್ಯ ಕಾಪಾಡಿಕೊಳ್ಳಲು ದಿನನಿತ್ಯ ವ್ಯಾಯಾಮ, ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು ಎಂದು ಪ್ರಧಾನ ಜಿಲ್ಲಾ ನ್ಯಾಯಾಧೀಶರಾದ ಬಿ.ಜಿ.ರಮಾ ಅವರು ತಿಳಿಸಿದರು.

ಧಾರವಾಡ ಐಐಟಿ ಓಟರೀಚ್ ವಿಭಾಗದ ಡೀನ್‌ರಾದ ಪ್ರೊ?ರ.ಎಸ್.ಎಂ.ಶಿವಪ್ರಸಾದ ಅವರು ಮಾತನಾಡಿ, ರಾಷ್ಟದ ಗಡಿ ಕಾಯುವ ಯೋಧರು ಬಾಹ್ಯ ದುಷ್ಟ ಶಕ್ತಿಗಳಿಂದ ರಾಷ್ಟ್ರ ರಕ್ಷಿಸುವಂತೆ, ಪೊಲೀಸರು ರಾಷ್ಟ್ರದೊಳಗಿನ ದುಷ್ಟಶಕ್ತಿಗಳನ್ನು ಮಟ್ಟಹಾಕಿ, ಆಂತರಿಕ ಭದ್ರತೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ.

ಪೊಲೀಸ್ ವರಿಷ್ಠಾಧಿಕಾರಿ ಡಾ.ಗೋಪಾಲ ಬ್ಯಾಕೋಡ ಅವರು ಮಾತನಾಡಿ, ಕರ್ತವ್ಯದ ಮೇಲೆ ಹುತಾತ್ಮರಾದ ಪೊಲೀಸ್ ಸಿಬ್ಬಂದಿ ಅಧಿಕಾರಿಗಳನ್ನು ಸ್ಮರಿಸಿದರು. ಮತ್ತು ದೇಶಕ್ಕಾಗಿ ಹೋರಾಡುತ್ತಾ ವೀರ ಮರಣ ಹೊಂದಿದ್ದ ಪೊಲೀಸರ ಸ್ಮರಣೆಗಾಗಿ ಸ್ಮಾರಕವನ್ನು ಲಡಾಕ್‌ನ ಬಾಸಿ ಚೀನಾ ಭಾಗದಲ್ಲಿ ಸ್ಥಾಪಿಸಲಾಗಿದೆ. ಕರ್ತವ್ಯದಲ್ಲಿದ್ದಾಗ ಹುತಾತ್ಮರರಾದ ಪೊಲೀಸರನ್ನು ದೇಶದಾದ್ಯಂತ ಎಲ್ಲ ಘಟಕಗಳಲ್ಲಿ ಸ್ಮರಿಸಲಾಗುತ್ತಿದೆ ಎಂದು ಹೇಳಿದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ನಾರಾಯಣ ಬರಮನಿ ವೇದಿಕೆಯಲ್ಲಿ ಇದ್ದರು.

ಪೊಲೀಸ್ ಅಧಿಕಾರಿಗಳಾದ ಆನಂದಕುಮಾರ.ಬಿ. ಮತ್ತು ವಾಯ್.ಎಂ.ದೊಡ್ಡಮನಿ ಕಾರ್ಯಕ್ರಮ ನಿರೂಪಿಸಿದರು.

ಇದೇ ಸಂದರ್ಭದಲ್ಲಿ ಹುತಾತ್ಮರಾದ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳಿಗೆ ಮೌನಾಚರಣೆ ಮಾಡಿ, ಶ್ರದ್ದಾಂಜಲಿ ಸಲ್ಲಿಸಲಾಯಿತು. ಅಧಿಕಾರಿಗಳು ಹಾಗೂ ಗಣ್ಯರುಗಳಿಂದ ಹುತಾತ್ಮರ ಪೊಲೀಸ್ ಸ್ಮಾರಕಕ್ಕೆ ಪುಷ್ಪಗುಚ್ಛವಿರಿಸಿ, ಗೌರವ ನಮನ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಹುತಾತ್ಮ ಯೋಧ ಹುಚ್ಚೇಶ ಹನುಮಂತಪ್ಪ ಮಲ್ಲನ್ನವರ ತಂದೆ ಹನುಮಂತಪ್ಪ, ತಾಯಿ, ಸಹೋದರಿ ನಾಗರತ್ನಾ, ಅವರ ಚಿಕ್ಕಪ್ಪ ಹಾಗೂ ಹುತಾತ್ಮರಾದ ಪೊಲೀಸರ ಕುಟುಂಬ ಸದಸ್ಯರು, ನಿವೃತ್ತ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳು, ಜಿಲ್ಲೆಯ ಎಲ್ಲ ಪೊಲೀಸ್ ಠಾಣೆಗಳ ಅಧಿಕಾರಿಗಳು, ಪೊಲೀಸರು, ಸಾರ್ವಜನಿಕರು ಭಾಗವಹಿಸಿ, ಹುತಾತ್ಮ ಪೊಲೀಸ್ ಯೋಧರಿಗೆ ನಮನ ಸಲ್ಲಿಸಿದರು.

## ಪೊಲೀಸರ ಕರ್ತವ್ಯ ಅಮೂಲ್ಯವಾದುದು



**ಹುಬ್ಬಳ್ಳಿ :** ಪೊಲೀಸ್ ಹುತಾತ್ಮರ ದಿನಾಚರಣೆ ಅಂಗವಾಗಿ ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರೇಟ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಎಕೆ ಫೌಂಡೇಷನ್ ಅಧ್ಯಕ್ಷ ವೆಂಕಟೇಶ ಕಾಟವೆ ಭಾಗವಹಿಸಿ, ಹುತಾತ್ಮ ಪೊಲೀಸರಿಗೆ ಗೌರವ ಸಲ್ಲಿಸಿದರು. ಈ ವೇಳೆ ಮಾತನಾಡಿದ ಅವರು, ಪೊಲೀಸರ ಕರ್ತವ್ಯ ಅಮೂಲ್ಯವಾಗಿದ್ದು, ತಮ್ಮ ಜೀವದ ಹಂಗು ತೊರೆದು ಕರ್ತವ್ಯ ನಿರ್ವಹಿಸುತ್ತಾರೆ. ಅವರಿಗೆ ಬಹಳ ಗೌರವ ನೀಡಬೇಕಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡಲು ಸಹಕರಿಸುವ ಮನೋಭಾವವನ್ನು ನಾವೆಲ್ಲರೂ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

# ಸಿಬ್ಬಂದಿ ಕೊರತೆ: 'ಸಕಾಲ'ಕ್ಕೆ ಸಿಗುತ್ತಿಲ್ಲ ಸೇವೆ

* ಮಲ್ಲಿಕಾರ್ಜುನ ತುಂಗಳ



**ರಬಕವಿ-ಬನಹಟ್ಟಿ :** ಅವಳಿ ನಗರದ ಸ್ಥಳೀಯ ಸಂಸ್ಥೆಯಲ್ಲಿ ಸಿಬ್ಬಂದಿ ಕೊರತೆ ಎದುರಿಸುತ್ತಿದೆ. ಸಾರ್ವಜನಿಕರಿಗೆ 'ಸಕಾಲ'ದಲ್ಲಿ ಸರ್ಕಾರಿ ಸೇವೆಯೂ ಸಿಗುತ್ತಿಲ್ಲ.

ಸಿಬ್ಬಂದಿ ಕೊರತೆ ನಿನ್ನೆ, ಮೊನ್ನೆಯದಲ್ಲ. ಹಲವು ವರ್ಷಗಳಿಂದ ಈ ಸಮಸ್ಯೆ ಕಾಡುತ್ತಿದೆ. ಯಾವದೇ ಹೊಸ ನೇಮಕಾತಿಯಾದರೂ ಹೊರಗುತ್ತಿಗೆ ಮೇಲೆ ಆಗುತ್ತಿದೆ. ಆದರೆ ಬೆಳೆಯುತ್ತಿರುವ ಜನಸಂಖ್ಯೆಗೆ ತಕ್ಕಂತೆ ಸಿಬ್ಬಂದಿ ನೇಮವಾಗದ ಕಾರಣ ಸಹಜವಾಗಿಯೇ ಅವರ ದೈನಂದಿನ ಕೆಲಸದ ಮೇಲೂ ಆಗುತ್ತಿದೆ.

**ಕೇವಲ 85 ಸಿಬ್ಬಂದಿ:**

ನಗರಸಭೆಯ ಒಟ್ಟು 40 ಪದನಾಮ ಹುದ್ದೆಗಳಲ್ಲಿ ಕೇವಲ 15 ವಿಭಾಗಗಳಿಂದ ಸೇವೆ ನಡೆಯುತ್ತಿದೆ. ಒಟ್ಟು 236 ಸಿಬ್ಬಂದಿಗಳು ಕಾರ್ಯನಿರ್ವಹಣೆಗೆ ಅವಕಾಶವಿದ್ದು, ಕೇವಲ 85 ಜನರು ಮಾತ್ರ ರಬಕವಿ-ಬನಹಟ್ಟಿ-ರಾಮಪೂರ-ಹೊಸೂರ ಪಟ್ಟಣಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಣೆಯಾಗಿದೆ. ಇದರಿಂದ ಜನರ ಸೇವೆ ಒದಗಿಸುವಲ್ಲಿ ಸಂಪೂರ್ಣ ವೈಫಲ್ಯ ಕಂಡಿದೆ.

ಫಾರಂ-3, ಮ್ಯುಟೇಶನ್, ಕಟ್ಟಡ ನಿರ್ಮಾಣ ಪರವಾಣಿಗೆ, ನೀರಿನ ಸಂಪರ್ಕ, ಒಳಚರಂಡಿ ಸಂಪರ್ಕ, ಜನನ-ಮರಣ ನೋಂದಣಿ ಪ್ರಮಾಣ ಪತ್ರ, ಕೇಬಲ್ ಅಳವಡಿಕೆ, ಬ್ಯಾನರ್ ಬಂಟಿಂಗ್ಸ್ ಅನುಮತಿ ಸಮಸ್ಯೆಯೊಂದಿಗೆ ಕಂದಾಯ ವಿಭಾಗದಲ್ಲಿಯೂ ತೀವ್ರ ಸಮಸ್ಯೆಯಿದೆ.

**'ಸಕಾಲ' ವೈಫಲ್ಯ:** ಸರ್ಕಾರಿ ಸೇವೆಗಳನ್ನು 'ಸಕಾಲ' ವ್ಯಾಪ್ತಿಗೆ ತಂದಿದ್ದು, ನಿಗದಿತ ಕಾಲಮಿತಿಯೊಳಗೆ ಆಯಾ ಸೇವೆಗಳನ್ನು ನೀಡಬೇಕು. ಆದರೆ ಕೆಲಸವೇ ಆಗುತ್ತಿಲ್ಲ. ಖಾತೆ ಬದಲಾವಣೆ, ಮ್ಯುಟೇಶನ್, ಕಟ್ಟಡ ನಿರ್ಮಾಣ ಅನುಮತಿಗೆ ಸಾರ್ವಜನಿಕರು ತಿಂಗಳುಗಟ್ಟಲೇ ಹೆಣಗಾಡಬೇಕಾದ ಪರಿಸ್ಥಿತಿ. ಮಧ್ಯವರ್ತಿಗಳ ಮೂಲಕ ಕಡತ ಕಳಿಸಿದರೆ ಬೇಗ ಕೆಲಸಗಳಾಗುತ್ತವೆ. ನಾವೇ ಸ್ವತಃ ಹೋಗಿ ಅರ್ಜಿ ಸಲ್ಲಿಸಿದರೆ ಯಾರೂ ಕೂಡ ಆ ಕಡತ ನೋಡುವದೇ ಇಲ್ಲ. ಅದನ್ನು ಪ್ರಶ್ನಿಸಲು ಹೋದರೆ ನೂರೆಂಟು ನೆಪ ಹೇಳಿ ಓಡಾಡಿಸುತ್ತಾರೆ ಎನ್ನುವದು ಸಾರ್ವಜನಿಕರ ದೂರು.

**'ಖಾತೆ ಬದಲಾವಣೆಗಾಗಿ ನಗರಸಭೆಗೆ ಅಲೆದು ಸುಸ್ತಾಗಿದೆ. ಇತ್ತ ಉದ್ಯೋಗ ಬಿಟ್ಟು ತೆರಳಬೇಕು. ಅಲ್ಲಿಂದ ಉತ್ತರ ಮಾತ್ರ ನಾಳೆ ಬಾ ಎಂದಾಗಿದೆ. ಜನರ ಸಮಸ್ಯಗೆ ಸ್ಪಂದಿನೆಯಾಗಲಿ'.**

**-ಪರಶುರಾಮ ಭಸ್ಮೆ, ಬನಹಟ್ಟಿ.**

**ನೇಕಾರರು ಹೈರಾಣ:**

ತುತ್ತಿನ ಚೀಲ ತುಂಬಿಸಿಕೊಳ್ಳುವದೇ ಸವಾಲಾಗಿರುವ ನೇಕಾರರಿಗೆ ನಗರಸಭೆ, ಕಂದಾಯ ಇಲಾಖೆಗಳ ಕೆಲಸ ಗಗನಕುಸುಮವಾಗಿವೆ. ಉದ್ಯೋಗ ಬಿಟ್ಟು ಕಚೇರಿಗಳಿಗೆ ಅಲೆದರೂ ಕೆಲಸವಾಗುತ್ತಿಲ್ಲ. ಇದರಿಂದ ಹಲವಾರು ನೇಕಾರರು ಸಮಸ್ಯೆಗಳಿದ್ದರೂ ಅಧಿಕಾರಿಗಳ ಮೊಂಡಾಟಿಕೆಯಿಂದ ಬೇಸತ್ತು ಕಚೇರಿಗಳಿಗೆ ತೆರಳುವದನ್ನೇ ಸ್ಥಗಿತಗೊಳಿಸಿದ್ದಾರೆ.

# ಪ್ರತಿ ಸೋಮವಾರ ಮಾಂಸಾಹಾರಿ ಅಂಗಡಿ ಸ್ವಯಂ ಪ್ರೇರಿತ ಬಂದ್

**ರಬಕವಿ-ಬನಹಟ್ಟಿ :** ಹಲವು ವರ್ಷಗಳಿಂದ ನೆರೆಯ ಮಹಾಲಿಂಗಪೂರ ಪಟ್ಟಣದಲ್ಲಿ ಪ್ರತಿ ಸೋಮವಾರ ಮಾಂಸಾಹಾರಿ ಹೊಟೇಲ್‌ಗಳು ಸಂಪೂರ್ಣವಾಗಿ ಸ್ವಯಂಪ್ರೇರಿತ ಬಂದ್ ಮಾಡುವ ಮೂಲಕ ಆ ಪಟ್ಟಣದ ಆರಾಧ್ಯದೈವ ಶ್ರೀ ಮಹಾಲಿಂಗೇಶ್ವರ ದೇವರ ಭಕ್ತಿಗೆ ಪರಾಕಾಷ್ಠೆ ಮೆರೆಯುವಲ್ಲಿ ಜನತೆ ಯಶಸ್ವಿಯಾಗಿದ್ದಾರೆ.

ಇದೀಗ ರಬಕವಿ-ಬನಹಟ್ಟಿ ನಗರದಲ್ಲಿಯೂ ಅದೇ ಸಂದೇಶವನ್ನು ಸಾಮಾಜಿಕ ಜಾಲತಾಣದಲ್ಲಿ ಕಳೆದ ವಾರವಷ್ಟೇ ಹರಿದಾಡುತ್ತಿರುವಾಗಲೇ ಶೇ.50 ಕ್ಕೂ ಅಧಿಕ ಮಾಂಸಾಹಾರಿ ಹೊಟೇಲ್ ವ್ಯಾಪಾರಸ್ಥರು ಕಳೆದ ಸೋಮವಾರ ಸ್ವಯಂ ಪ್ರೇರಿತ ಬಂದ್ ಮಾಡುವ ಮೂಲಕ ಸಂಪ್ರದಾಯ ಬದ್ಧ ಜನರ ಭಾವನೆಗಳಿಗೆ ಸಹಕರಿಸುವಲ್ಲಿ ಕಾರಣವಾಗಿದ್ದು ವಿಶೇಷ. ಬನಹಟ್ಟಿಯ ಆರಾಧ್ಯದೈವ ಶ್ರೀ ಕಾಡಸಿದ್ಧೇಶ್ವರ ಹಾಗು ರಬಕವಿಯ ಆರಾಧ್ಯದೈವ ಶ್ರೀ ಮಲ್ಲಿಕಾರ್ಜುನ ದೇವರ ಮಹತ್ವದ ದಿನವಾದ ಸೋಮವಾರದಂದು ಯಾವದೇ ಕಾರಣಕ್ಕೂ ಮಾಂಸ ಮಾರಾಟ ಹಾಗು ಮಾಂಸಾಹಾರಿ ಹೊಟೇಲ್‌ಗಳಿಗೆ ಅವಕಾಶ ನೀಡಬಾರದೆಂದು ಸಂದೇಶವನ್ನು ಸಾಮಾಜಿಕ ಜಾಲತಾಣದಲ್ಲಿ ಪೂರಕ ವಾತಾವರಣ ಸೃಷ್ಟಿಯಾಗಿತ್ತು. ಇದನ್ನು ಮನಗಂಡ ವ್ಯಾಪಾರಿಗಳು ಸ್ವಯಂ ಬಂದ್ ಮಾಡಿದ್ದಾರೆ.

ಇಲ್ಲಿಯವರೆಗೂ ಯಾವದೇ ಬಹಿರಂಗ ಸಭೆ ಅಥವಾ ಸಂದೇಶ ಟ್ರಸ್ಟ್ ಅಥವಾ ಸಮಿತಿಯಿಂದ ಹೊರಬಿದ್ದಿಲ್ಲ. ಆದರೂ ಈ ನಿರ್ಧಾರಕ್ಕೆ ಸ್ವಯಂಪ್ರೇರಿತ ಸಹಕಾರ ನೀಡಿರುವ ವ್ಯಾಪಾರಿಗಳಿಗೆ ಸ್ಥಳೀಯ ದೈವ ಮಂಡಳಿಗಳು ಹಾಗು ಹಲವಾರು ಸಂಘಟನೆಗಳು ಸ್ವಾಗತಿಸಿವೆ.

# ಸಾರಿಗೆ ಸಚಿವರ ಮಾತಿಗೂ ಕವಡೆ ಕಾಸಿನ ಕಿಮ್ಮತ್ತಿಲ್ಲ

# ಬಸ್ ನಿಲ್ದಾಣ ದ್ವಾರವೇ ಕಸದ ಕೊಟ್ಟಿಗೆ

* ಮಲ್ಲಿಕಾರ್ಜುನ ತುಂಗಳ




**ರಬಕವಿ-ಬನಹಟ್ಟಿ :** ಕಳೆದ ತಿಂಗಳು ರಬಕವಿ-ಬನಹಟ್ಟಿ ಬಸ್ ನಿಲ್ದಾಣ ಉದ್ಘಾಟನೆ ಸಂದರ್ಭ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿ, ಈ ಭಾಗದ ಹಲವಾರು ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ನೂತನ ಬಸ್‌ಗಳನ್ನು ಓಡಿಸುವದರ ಜೊತೆಗೆ ನಿಲ್ದಾಣದೊಳಗಿನ ಮೂಲಭೂತ ಸೌಕರ್ಯಗಳಿಗೆ ಸೂಕ್ತ ಕ್ರಮ ಜರುಗಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ಕೇವಲ ಭರವಸೆಯಾಗಿಯೇ ಉಳಿದಿರುವದು ಈ ಭಾಗದ ಜನರಲ್ಲಿ ಬೇಸರ ತರುವಲ್ಲಿ ಕಾರಣವಾಗಿದೆ.

ನೇಕಾರಿಕೆ ಉದ್ಯಮ ಹೊಂದಿರುವ ತಾಲೂಕಾ ಕೇಂದ್ರ ಪ್ರದೇಶವಾಗಿರುವ ರಬಕವಿ-ಬನಹಟ್ಟಿಗೆ ಹಲವಾರು ಬಸ್‌ಗಳು ಸಂಚರಿಸುವಂತೆ ಆಗ್ರಹಿಸಿದ್ದರು. ಅಲ್ಲದೆ ಬೆಂಗಳೂರಿಗೆ ಹವಾನಿಯಂತ್ರಿತ ಅಥವಾ ಸುಖಾಸೀನ ಬಸ್ ವ್ಯವಸ್ಥೆ ಕಲ್ಪಿಸುವಂತೆಯೂ ಬೇಡಿಕೆಯಿಟ್ಟಿದ್ದರು. ಒಂದು ವಾರದೊಳಗಾಗಿ ಈ ಕಾರ್ಯ ನಡೆಸುವ ಭರವಸೆ ಹಾಗೇ ಉಳಿದಿದೆ.

ಬಸ್ ನಿಲ್ದಾಣ ದ್ವಾರವೇ ಕಸದ ಕೊಟ್ಟಿಗೆ: ಬಸ್ ಸಂಚಾರವಾಗುವ ದ್ವಾರವೇ ಕಸದ ಕೊಟ್ಟಿಗೆಯಾಗಿದ್ದು, ಸ್ವಚ್ಛತೆಯೆಂಬುದು ಸವಾಲಾಗಿದೆ. ದಿನಂಪ್ರತಿ ಈ ಭಾಗದಲ್ಲಿರುವ ಬಾರ್ ಮತ್ತು ಹೋಟೆಲ್‌ನ ಸಿಬ್ಬಂದಿ ಇಲ್ಲಿಯೇ ಬಂದು ಕಸ ಒಗೆದು ಸಂಪೂರ್ಣ ದುರ್ನಾತಕ್ಕೆ ಕಾರಣವಾಗಿದ್ದಲ್ಲದೆ, ಅದೇ ಕಸದಲ್ಲಿಯೇ ಬಸ್‌ಗಳ ಸಂಚಾರವಾಗತ್ತವೆ. ಇದಕ್ಕೆ ನಗರಸಭೆ ಅಧಿಕಾರಿಗಳು ಕಠಿಣ ಕ್ರಮ ಕೈಗೊಳ್ಳದೆ ಕಾಟಾಚಾರಕ್ಕೆ ಆಗಾಗ್ಗೆ ಕಸ ವಿಲೇವಾರಿ ಮಾಡುತ್ತಿರುವದು ಸೋಜಿಗದ ಸಂಗತಿ.ನ.8 ರಂದು ಪ್ರತಿಭಟನೆಗೆ ನಿರ್ಧಾರ: ತಾಲೂಕಾ ಕೇಂದ್ರವಾಗಿರುವ ರಬಕವಿ-ಬನಹಟ್ಟಿಗೆ ಸಮರ್ಪಕ ಬಸ್ ಸೌಕರ್ಯ ಹಾಗು ಬಸ್ ನಿಲ್ದಾಣದೊಳಗಿನ ಮೂಲಭೂತ ಸೌಕರ್ಯ ವೈಫಲ್ಯ ಖಂಡಿಸಿ ನ.8 ರಂದು ರಬಕವಿ-ಬನಹಟ್ಟಿ ಅಭಿವೃದ್ಧಿ ಸಮಿತಿಯಿಂದ ಪ್ರತಿಭಟನೆ ನಡೆಸಲಾಗುವದೆಂದು ಸಮಿತಿ ಅಧ್ಯಕ್ಷ ಮುರಳಿಧರ ಕಾಬರಾ ತಿಳಿಸಿದ್ದಾರೆ.

ತಾಲೂಕಾ ಕೇಂದ್ರವಾಗಿ 15 ವರ್ಷಗಳು ಉರುಳಿದರೂ ಬಸ್ ಘಟಕ ಸ್ಥಾಪನೆಯಾಗಿಲ್ಲ. ಜಮಖಂಡಿ ಘಟಕದಿಂದ ರಬಕವಿ-ಬನಹಟ್ಟಿ ತಾಲೂಕಿಗೆ ಅನ್ಯಾಯವಾಗುತ್ತಿದ್ದು, ಒಂದೇ ಒಂದು ಬಸ್ ಕಲ್ಪಿಸುವಲ್ಲಿ ವಿಫಲರಾಗಿದ್ದಾರೆ. ರಾತ್ರಿ ಹೊತ್ತು ಜಮಖಂಡಿಯಿಂದ ಬನಹಟ್ಟಿಗೆ ತೆರಳಲು ಬಸ್ ವ್ಯವಸ್ಥೆಯಿಲ್ಲ. ಹೀಗೆ ಹಲವಾರು ಸಮಸ್ಯೆಗಳನ್ನು ಹೊತ್ತು ನಿಂತಿರುವ ಅವಳಿ ಪಟ್ಟಣಕ್ಕೆ ಪಾರದರ್ಶಕ ನ್ಯಾಯ ಒದಗಿಸಬೇಕೆಂದು ನ.8 ರಂದು ಪ್ರತಿಭಟನೆ ನಡೆಸಲಾಗುವದೆಂದು ಕಾಬರಾ ತಿಳಿಸಿದ್ದಾರೆ.

# ಪಡಿತರ ಸರ್ವರ್ ಸಮಸ್ಯೆ: ಜನರು ಹೈರಾಣ

# ದಿನವಿಡೀ ಅಂಗಡಿ ಮುಂದೆ ಕುಂತರೂ ಸಿಗದ ರೇಷನ್

* ಮಲ್ಲಿಕಾರ್ಜುನ ತುಂಗಳ



**ರಬಕವಿ-ಬನಹಟ್ಟಿ :** ತಾಲೂಕಿನಾದ್ಯಂತ ನ್ಯಾಯಬೆಲೆ ಅಂಗಡಿಗಳಲ್ಲಿ ಸರ್ವರ್ ಸಮಸ್ಯೆಯಿಂದ ಪಡಿತರ ಪಡೆಯಲು ಪರದಾಡುವ ಪರಿಸ್ಥಿತಿ ಎದುರಾಗಿದೆ.

ತಾಲೂಕಿನಾದ್ಯಂತ ಕಳೆದೊಂದು ವಾರದಿಂದ ಆಹಾರ ಇಲಾಖೆ ಸರ್ವರ್ ಸಮಸ್ಯೆಯಿಂದ ದಿನವಿಡೀ ಸರತಿ ಸಾಲಿನಲ್ಲಿ ನಿಂತರೂ ಸಮಸ್ಯೆಗೆ ಪರಿಹಾರವಿಲ್ಲದಂತಾಗಿದೆ.

ಸರ್ವರ್ ಮಧ್ಯಾಹ್ನ ಸರಿ ಹೋಗತ್ತೆ, ಸಂಜೆ ಆಗತ್ತೆ ಎಂದು ಕಾದು ಕುಳಿತ ಗ್ರಾಹಕರು ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಮರಳಿ ಮನೆಗೆ ವಾಪಸ್ಸಾಗುತ್ತಿದ್ದು, ಮರಳಿ ಬೆಳಗಿನ ಜಾವವೇ ಸರದಿಯಲ್ಲಿ ನಿಲ್ಲುವ ಸಂಕಷ್ಟ ಇವರದು.

ದೈನಂದಿನ ಕೆಲಸ ಬಿಟ್ಟು, ಅದರಲ್ಲೂ ಈ ಭಾಗದಲ್ಲಿ ಮಗ್ಗಗಳ ಮುಂದೆ ನಿಂತರೆ ಮಾತ್ರ ಉದ್ಯೋಗ ಇಲ್ಲವಾದರೆ ಖಾಲಿ ಹೊಟ್ಟೆಯೇ ಗತಿ.

ಸಂಕಷ್ಟದಲ್ಲಿ ಗ್ರಾಹಕರು: ಕಳೆದೊಂದು ವಾರದಿಂದ ಪಡಿತರ ತರುವಲ್ಲಿ ಹರಸಾಹಸ ಪಡುತ್ತಿಇರುವ ಜನರು ತಮ್ಮ ಕೆಲಸ ಬಿಟ್ಟು ಪಡಿತರ ಆಹಾರಕ್ಕೆ ಪರದಾಡುವಂತಾಗಿದೆ. ಇತ್ತ ನೇಯ್ಗೆಯಿಲ್ಲದೆ ಹೊಟ್ಟೆ ತುಂಬುವದೇ ಸವಾಲಾಗುತ್ತಿದ್ದರೆ, ಮತ್ತೊಂದೆಡೆ ಸರ್ವರ್ ಕಾಟ ನೇಕಾರರಿಗೆ ಕಂಟಕವಾಗಿದೆ.

**'ಸರ್ವರ್ ಸಮಸ್ಯೆಯಿಂದ ಬೆಳಗಿನ ಜಾವದಿಂದಲೇ ಪಡಿತರ ಕೇಂದ್ರ ಮುಂದೆ ನಿಂತು ದಿನವಿಡೀ ಕಾಯಬೇಕಾದ ಪರಿಸ್ಥಿತಿ. ಸರ್ಕಾರ ಶೀಘ್ರ ಸಮಸ್ಯೆ ಪರಿಹರಿಸಲಿ'.**

**। ರಾಜು ಶಿರಹಟ್ಟಿ,**
**ಬನಹಟ್ಟಿ ನಿವಾಸಿ.**

**'ರಾಜ್ಯಾದ್ಯಂತ ಹೊಸ ಸಾಫ್ಟ್‌ವೇರ್ ಅಳವಡಿಕೆ ಕಾರಣ ತಾಂತ್ರಿಕ ಸಮಸ್ಯೆಯಾಗಿದೆ. ತಾಲೂಕಿನಾದ್ಯಂತ ಶೇ.60 ರಷ್ಟು ಪಡಿತರ ವಿತರಣೆಯಾಗಿದೆ. ಜನರ ಅನುಕೂಲಕ್ಕಾಗಿ ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 10 ಗಂಟೆವರೆಗೂ ಪಡಿತರ ಅಂಗಡಿ ಮೂಲಕ ವಿತರಣೆಗೆ ಆದೇಶವಿದೆ.'**

**। ರವಿ ಲಮಾಣಿ,**
**ಆಹಾರ ನಿರೀಕ್ಷಕರು,**
**ರಬಕವಿ-ಬನಹಟ್ಟಿ.**

# ರಾಜ್ಯಮಟ್ಟದಲ್ಲಿ ಸಾಧನೆ



**ಬನಹಟ್ಟಿ :** ಈಚೆಗೆ ಖಾನಾಪೂರದಲ್ಲಿ ಜರುಗಿದ ರಾಜ್ಯಮಟ್ಟದ ಪಿಯು ಕಾಲೇಜಿನ ಫ್ರೀಸ್ಟೈಲ್ ಕುಸ್ತಿಯಲ್ಲಿ ಬನಹಟ್ಟಿ ಎಸ್‌ಆರ್‌ಎ ಕಾಲೇಜಿನ ವಿದ್ಯಾರ್ಥಿಗಳಾದ ಆನಂದ ತೇಲಿ 125 ಕೆಜಿಯಲ್ಲಿ ದ್ವಿತೀಯ, ಬಸವರಾಜ ಬೆಳ್ಳಿಗೇರಿ 70 ಕೆಜಿ ಫ್ರೀಸ್ಟೈಲ್ ಕುಸ್ತಿಯಲ್ಲಿ ತೃತೀಯ ಸ್ಥಾನ ಪಡೆದು ಸಾಧನೆ ಮೆರೆದಿದ್ದಾರೆ.

ಅದರಂತೆ ಚಿಕ್ಕ ಬಳ್ಳಾಪೂರದಲ್ಲಿ ಜರುಗಿದ ರಾಜ್ಯಮಟ್ಟದ ಬೆಲ್ಟ್‌ಕುಸ್ತಿಯಲ್ಲಿ ಗಿರಮಲ್ಲಪ್ಪ ಮನ್ನಿಕೇರಿ 60ಕೆಜಿ ಬೆಲ್ಟ್ ಕುಸ್ತಿಯಲ್ಲಿ ದ್ವಿತೀಯ ಹಾಗು ನಾಗರಾಜ ಬಿ.ಪಾಟೀಲ 45 ಕೆಜಿ ಬೆಲ್ಟ್ ಕುಸ್ತಿಯಲ್ಲಿ ತೃತಿಯ ಸ್ಥಾನ ಪಡೆದು ಸಾಧನೆ ಮಾಡಿದ್ದಾರೆ.

# ಐ.ಎನ್.ಬಿ.ಸಿ.ಡಬ್ಲ್ಯೂಎಫ್‌ಎನ್ ಮಹಿಳಾ ಘಟಕದ ರಾಜ್ಯಾಧ್ಯಕ್ಷರ ನೇಮಕ




**ಮುದ್ದೇಬಿಹಾಳ :** ಪಟ್ಟಣದ ಹುಡ್ಕೋ ಕಾಲೂನಿಯ ನಿವಾಸಿಗಳಾದ ಸಂಗೀತಾ ನೀಲಕಂಠರಾವ್ ನಾಡಗೌಡ ಇವರನ್ನು ಐ.ಎನ್.ಬಿ.ಸಿ.ಡಬ್ಲ್ಯೂ.ಎಫ್ನ ರಾಷ್ಟ್ರೀಯ ಅಧ್ಯಕ್ಷ ರಾಮಚಂದ್ರ ಕುಂಟೀಯವರ ಆದೇಶದ ಮೇರೆಗೆ ಐ.ಎನ್.ಬಿ.ಸಿ.ಡಬ್ಲ್ಯೂಎಫ್‌ಎನ್ ಮಹಿಳಾ ಘಟಕದ ರಾಜ್ಯಾಧ್ಯಕ್ಷಯನ್ನಾಗಿ ನೇಮಕ ಮಾಡಿ ಆದೇಶಿಸಲಾಗಿದೆ. ತಕ್ಷಣದಿಂದ ತಮಗೆ ವಹಿಸಲಾಗಿರುವ ಹೊಣೆಗಾರಿಕೆಯನ್ನು ನಿಷ್ಠೆಯಿಂದ ನಿರ್ವಹಿಸುತ್ತಾ ರಾಜ್ಯ ಮತ್ತು ಜಿಲ್ಲಾ ಕಾಂಗ್ರೇಸ್ ಸಮಿತಿಯ ಮಾರ್ಗದರ್ಶನದಲ್ಲಿ ಹಾಗೂ ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ಥಳೀಯ ನಾಯಕರುಗಳ ಸಹಕಾರದೊಂದಿಗೆ ತಮಗೆ ನೀಡಲಾಗಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿ, ಕಾಂಗ್ರೇಸ್ ಪಕ್ಷದ ಸಂಘಟನೆಗೆ ಹಾಗೂ ಕಾರ್ಮಿಕರ ಏಳಿಗೆಗಾಗಿ ಹಾಗೂ ಐ.ಎನ್.ಬಿ.ಸಿ.ಡಬ್ಲ್ಯೂ.ಎಫ್ನ ಪರವಾಗಿ ಸಂಘ (ಯೂನಿಯನ್) ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರನ್ನು ನೊಂದಾಯಿಸಿಕೊಂಡು ಸಂಘಟನೆ ಮಾಡಬೇಕು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ವರದಿ : ಖುಷ್ಟರ್ ಚೋಪ್ದಾರ್ ಮುದ್ದೇಬಿಹಾಳ**

# ಖಡ್ಗವಾಗಲಿ ಕಾವ್ಯ ಎಂದವರು ಬಸವರಾಜ ಕಟ್ಟಿಮನಿ: ಡಾ. ಆನಂದಕುಮಾರ



**ಮೂಡಲಗಿ :** ಖಡ್ಗವಾಗಲಿ ಕಾವ್ಯ ಎಂದು ಕನ್ನಡ ಸಾಹಿತ್ಯದಲ್ಲಿ ಬಂಡಾಯದ ದನಿ ಮೊಳಗುವುದಕ್ಕೂ ಮೊದಲೇ ಶೋಷಣೆ, ಅನ್ಯಾಯಗಳಿಗೆ ದನಿಯಾಗಬೇಕೆಂಬ ಬದ್ಧತೆಯಿಂದ ಸಾಮಾಜಿಕ ವಾಸ್ತವ ಮಾರ್ಗದಲ್ಲಿ ಕಥೆ–ಕಾದಂಬರಿಗಳನ್ನು ರಚಿಸಿದವರು ಬಸವರಾಜ ಕಟ್ಟೀಮನಿಯವರು ಎಂದು ಕಾಗವಾಡದ ಶಿವಾನಂದ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಆನಂದಕುಮಾರ ಜಕ್ಕನ್ನವರ ಹೇಳಿದರು.

ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಪ್ರಥಮ ದರ್ಜೆ ಕಾಲೇಜು ಹಾಗೂ ಬೆಳಗಾವಿಯ ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಸಹಯೋಗದಲ್ಲಿ ಆಯೋಜಿಸಿದ್ದ ಬಸವರಾಜ ಕಟ್ಟೀಮನಿ ಪುಣ್ಯಸ್ಮರಣೆ ನಿಮಿತ್ತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು.

ಮುಚ್ಚುಮರೆಯಿಲ್ಲದೆ, ಬಿಚ್ಚುಮಾತಿನಿಂದ ಸಾಹಿತ್ಯ ಬರೆದವರು ಕಟ್ಟೀಮನಿಯವರು. ಅವರು ಅತ್ಯಂತ ಸ್ವಾಭಿಮಾನಿ ಮತ್ತು ರಾಷ್ಟ್ರಪ್ರೇಮಿ ಆಗಿದ್ದರು. ಅವರ ಸಾಹಿತ್ಯವನ್ನು ವಿದ್ಯಾರ್ಥಿಗಳು ಓದಿ ಅರ್ಥೈಸಿಕೊಳ್ಳಬೇಕು ಎಂದು ಕರೆ ನೀಡಿದರು.

ಪ್ರತಿಷ್ಠಾನದ ಸದಸ್ಯ ಸಂಚಾಲಕ ಪ್ರೊ. ಚಂದ್ರಶೇಖರ ಅಕ್ಕಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕಟ್ಟೀಮನಿಯವರು ತುಂಬಾ ಸರಳ, ಸಜ್ಜನಿಕೆಯಿಂದ ಬಾಳಿ ಬದುಕಿದವರು. ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪದವಿ ಕಾಲೇಜು ವರ್ಷದುದ್ದಕ್ಕೂ ನೂರಾರು ಪಠ್ಯ ಪಠ್ಯೇತರ ಚಟುವಟಿಗಳನ್ನು ಆಯೋಜಿಸುವ ಮೂಲಕ ವಿಶ್ವವಿದ್ಯಾಲಯದ ಮಟ್ಟಕ್ಕೆ ಬೆಳೆಯುತ್ತಿರುವುದು ಸಂತೋಷದ ಸಂಗತಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಚೇರಮನ್ನ ಬಸಗೌಡ ಪಾಟೀಲ ಮಾತನಾಡಿ, ವಿದ್ಯಾರ್ಥಿಗಳು ಒಳ್ಳೆಯ ಕಥೆ, ಕವನ, ಕಾದಂಬರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಓದುವ ಮೂಲಕ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕು ಎಂದರು.

ಕಟ್ಟಿಮನಿ ಪ್ರತಿಷ್ಠಾನದ ಸದಸ್ಯರಾದ ಶಿವಕುಮಾರ್ ಕಟ್ಟಿಮನಿ ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ಡಾ. ಸುರೇಶ ಹನಗಂಡಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಅಧ್ಯಾಪಕರುಗಳಾದ ಡಾ. ಎಂ.ಬಿ. ಕುಲಮೂರ, ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಶಂಕರ ನಿಂಗನೂರ, ಆರ್. ಎಸ್. ಪಂಡಿತ, ವಿಲಾಸ ಕೆಳಗಡೆ, ಎಸ್.ಎಂ. ಬಂಡಿ, ಸಂತೋಷ ಜೋಡಕುರಳಿ, ವಸುಂದರಾ ಕಾಳೆ, ರಾಜಶ್ರೀ ತೋಟಗಿ, ಮಲ್ಲಪ್ಪ ಕರಗಣ್ಣಿ, ಬಿ.ಸಿ. ಮಾಳಿ, ಸಾಗರ ಐದಮನಿ, ಎಂ.ಬಿ. ಜಾಲಗಾರ, ಗ್ರಂಥಪಾಲಕ ಬಿ.ಬಿ. ವಾಲಿ, ಬಿ.ಕೆ. ಸೊಂಟನವರ ಹಾಗೂ ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಡಾ. ಕೆ.ಎಸ್. ಪರವ್ವಗೋಳ ನಿರೂಪಿಸಿದರು. ಪ್ರೊ. ಡಿ.ಎಸ್. ಹುಗ್ಗಿ ಸ್ವಾಗತಿಸಿದರು. ಕು. ರಾಧಿಕಾ ಕರೆಪ್ಪಗೋಳ ಪ್ರಾರ್ಥಿಸಿದರು. ಪ್ರೊ. ವಿಲಾಸ ಕೆಳಗಡೆ ವಂದಿಸಿದರು.

# ವೀರರಾಣಿ ಕಿತ್ತೂರು ಚೆನ್ನಮ್ಮ ನವರ ಜಯಂತಿ ಕಾರ್ಯಕ್ರಮ



**ಬಾಗಲಕೋಟೆ :** ವಿಧಾನ ಪರಿಷತ್ ಶಾಸಕರಾದ ಪಿಎಚ್ ಪೂಜಾರ ಇವರ ಜನಸಂಪರ್ಕ ಕಾ೦ರ್ಯಾಲ೦ಯದಲ್ಲಿ ನಡೆದ ವೀರರಾಣಿ ಕಿತ್ತೂರು ಚೆನ್ನಮ್ಮ ನವರ ಜ೦ಯಂತಿ ಕಾ೦ರ್ಯಕ್ರಮ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಲಾಯಿತಟದ ಡಾ. ಶೇಖರ್ ಮಾನೆ ಅವರು ಮಾತನಾಡಿ ಬ್ರಿಟಿಷರ ವಿರುದ್ಧ ಮೊದಲನೇ ೦ಯುದ್ಧದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮ ಗೆಲುವು ಸಾಧಿಸಲಿಕ್ಕೆ ಅವರ ವೀರಸೇನಾನಿಗಳಾದ ಸಂಗೊಳ್ಳಿ ರಾ೦ಯಣ್ಣ, ಅಮಟೂರು ಬಾಳಪ್ಪ ,ಸರ್ದಾರ್ ಅವರಾದಿ, ಚೆನ್ನಬಸಪ್ಪ ,ಹಾಗೂ ಇನ್ನೂ ಅನೇಕ ವೀರ ೦ಯೋಧರು ಹೋರಾಟವೇ ಕಾರಣ ಎಂದರು.

ಎರಡನೇ ೦ಯುದ್ಧದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಸೋಲಲು ಅವರ ಸೈನ್ಯದ ಸೋಲಿಗೆ ಅವರ ಹಿತ ಶತ್ರುಗಳೇ ಕಾರಣರಾಗಿದ್ದು ದುರ್ದೈವದ ಸಂಗತಿ. ಇದೇ ರೀತಿ ಇವತ್ತಿನ ಕಾಲಮಾನದಲ್ಲಿ ಜಾತಿ ಜಾತಿಗಳಲ್ಲಿ ನಾವು ಹೊಡೆದಾಡಿಕೊಳ್ಳುತ್ತಾ ಇದ್ದಲ್ಲಿ ರಾಷ್ಟ್ರದ ರಕ್ಷಣೆ ಮತ್ತು ಹಿಂದೂ ಧರ್ಮದ ರಕ್ಷಣೆ ಅಸಾಧ್ಯ. ಆದ–'ಕಾರಣ ಜಾತಿ ಜಾತಿಗಳನ್ನು ಮರೆತು ನಾವೆಲ್ಲರೂ ಹಿಂದೂ ಎನ್ನುವ ಭಾವನೆ ನಮ್ಮೆಲ್ಲರಲ್ಲಿ ಮೂಡಬೇಕೆಂದು ಕರೆ ನೀಡಿದರು.

ಇನ್ನೋರ್ವ ಮುಖಂಡರಾದ ವಿರುಪಾಕ್ಷ ಅಮ್ರುತಕರ ಅವರು ಮಾತನಾಡಿ ಸೂ೦ರ್ಯ ಮುಳುಗದ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸವಾಲ್ ಎಸೆದು ಬ್ರಿಟಿಷರ ವಿರುದ್ಧದ ೦ಯುದ್ಧದಲ್ಲಿ ಸಿಮ್ಮನಿ೦ಯಂತೆ, ರಣಚಂಡಿ೦ಯ ಅವತಾರದ ಪ್ರತೀಕವಾಗಿ ಬ್ರಿಟಿಷ್ ಅಧಿಕಾರಿ ಮತ್ತು ಸೈನಿಕರ ರುಂಡ ಮುಂಡಗಳನ್ನು ಚಂಡಾಡಿ ವಿಜ೦ಯ ದುಂದುಬಿ೦ಯೊಂದಿಗೆ ದಿಟ್ಟತನಕ್ಕೆ ಹೋರಾಟಕ್ಕೆ ಮತ್ತೊಂದು ಹೆಸರೇ ವೀರರಾಣಿ ಕಿತ್ತೂರು ಚೆನ್ನಮ್ಮ, ಹಾಗೂ ನಾರಿ ಶಕ್ತಿ೦ಯ ಅನಾವರಣಕ್ಕೆ ಮತ್ತೊಂದು ಹೆಸರೇ ಚೆನ್ನಮ್ಮಾಜಿ ಎಂದರು.


ಈ ಸಂದರ್ಭದಲ್ಲಿ ಶಂಭುಗೌಡ ಪಾಟೀಲ್, ಕುಮಾರ ಗಿರಿಜಾ, ರಾಜು ಚಿತ್ತವಾಡಗಿ ಮಲ್ಲಿಕಾ ರ್ಜುನ್ ಸುರಪುರ, ಕಳಕಪ್ಪ ಬಾದವಾಡಗಿ, ಸಂಗನಗೌಡ ಗೌಡರ,ರಮೇಶ ಮುರಟಗಿ, ೦ಯಲ್ಲಪ್ಪ ಅಂಬಿಗೇರ,, ಶೈಲು ಅಂಗಡಿ, ಅನಂತ ಮಳಗಿ, ವಿನಾ೦ಯಕ ದೇಸಾಯಿ,ರಾಘು ನಾಗೂರ, ಲಕ್ಷ್ಮಣಗೌಡ ಪಾಟೀಲ, ಬಸವರಾಜ ಮಾದರ್, ಗುರುಬಸ೦ಯ್ಯ ಪೂಜಾರಿ, ಗಣೇಶ್ ದುದ್ದಾನೆ, ಡಾಕ್ಟರ್ ಸುಧೀರ ಜಾಧವ, ಡಾಕ್ಟರ್ ಕೃಷ್ಣ ಚೌಧರಿ ,೦ಯಮನಪ್ಪ ಮಡ್ಡಿಕೇರಿ, ಮುತ್ತಪ್ಪ ಪೂಜಾರಿ ಆರ್ ಆರ್ ಪಾಟೀಲ್, ವಿರೂಪಾಕ್ಷ ಬೆನ್ನಾಳ, ಗೋಪಾಲ್ ಕಟ್ಟಿಮನಿ, ಮತ್ತಿತರರು ಉಪಸ್ಥಿತರಿದ್ದರು.

# ಹರಿಪ್ರಸಾದ್ ಹೇಳಿಕೆಗೆ ಬ್ರಾಹ್ಮಣ ಸಮಾಜ ಖಂಡನೆ

**ಬಾಗಲಕೋಟೆ :** ಜಾತಿ ಜನಗಣತಿ ವಿಚಾರದಲ್ಲಿ ಗೌರವಯುತವಾಗಿ ತಮ್ಮ ಅಭಿಪ್ರಾಯ ಮಂಡಿಸಿರುವ ಪೇಜಾವರಮಠದ ಶ್ರೀವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರ ಕುರಿತು ಲಘುವಾಗಿ ಮಾತನಾಡಿರುವ ಕಾಂಗ್ರೆಸ್ ಮುಖಂಡ ಬಿ.ಕೆ.ಹ–ರಿಪ್ರಸಾದ್ ಕೂಡಲೇ ಬೇಷರತ್ ಕ್ಷಮೆಯಾಚಿಸಬೇಕೆಂದು ಬ್ರಾಹ್ಮಣ ಸಮಾಜ ಆಗ್ರಹಿಸಿದೆ. ಈ ಕುರಿತು ಜಂಟಿ ಪ್ರಕಟಣೆ ಬಿಡುಗೆಗೊಳಿಸಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಘಟಕ ಹಾಗೂ ಬ್ರಾಹಣ ತರುಣ ಸಂಘಗಳು ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಮಾನವಾಗಿ ಮಾತನಾಡಲು ಹಕ್ಕಿದೆ. ಜಾತಿ ಜನಗಣತಿ ವಿಚಾರದಲ್ಲಿ ಶ್ರೀಗಳು ಯಾರನ್ನೂ ಟೀಕಿಸಿಲ್ಲ. ಸಮ ಸಮಾಜ ನಿರ್ಮಾಣವಾಗಬೇಕಾದರೆ ಅಲ್ಲಿ ಜಾತಿಗಳನ್ನು ಇಬ್ಭಾಗ ಮಾಡಿ ವೈಭವೀಕರಿಸಬಾರದು ಎಂಬುದಷ್ಟೇ ಅವರ ಹೇಳಿಕೆಯಾಗಿದೆ. ಆದರೆ ಅವರ ಹೇಳಿಕೆಯನ್ನು ಖಂಡಿಸುವ ಭರದಲ್ಲಿ ಹರಿಪ್ರಸಾದ್ ಅವರು ಶ್ರೀಗಳ ಬಗ್ಗೆ ಲಘುವಾಗಿ ಮಾತನಾಡಿದ್ದು, ಅವರು ಕೂಡಲೇ ಕ್ಷಮೆಯಾಚಿಸದಿದ್ದರೆ ಸಮಾಜ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಸಿವೆ.

ಮಹಾಸಭೆಯ ರಾಜ್ಯ ಉಪಾಧ್ಯಕ್ಷ ಡಾ.ಗಿರೀಶ ಮಸೂರಕರ, ಜಿಲ್ಲಾಧ್ಯಕ್ಷ ನರಸಿಂಹ ಆಲೂರ, ಬ್ರಾಹ್ಮಣ ತರುಣ ಸಂಘದ ಅಧ್ಯಕ್ಷ ನಾರಾಯಣ ದೇಸಾಯಿ, ಕಾರ್ಯದರ್ಶಿ ಡಿ.ಬಿ.ಕುಲಕರ್ಣಿ, ಹುನಗುಂದದ ವಕೀಲ ವೆಂಕಟೇಶ ದೇಶಪಾಂಡೆ ಮತ್ತಿತರರು ಹರಿಪ್ರಸಾದ್ ಹೇಳಿಕೆ ಖಂಡಿಸಿದ್ದಾರೆ.

# ಏಕಾಗ್ರತೆ ಇಲ್ಲದೆ ಯಶಸ್ಸು ಸಾಧ್ಯವೇ?



ಏಕಾಗ್ರತೆರಾಹಿತ್ಯ ಮನೋಸ್ಥಿತಿಯ ಬಗ್ಗೆ ವ್ಯಾಪಕವಾದ ಕಳವಳ ಅಥವಾ ಕಳಕಳಿ ವ್ಯಕ್ತವಾಗುತ್ತಿದೆ. ವಯಸ್ಸಿನ ಬೇಧವಿಲ್ಲದೆ ಈ ಸಂಗತಿಯು ಸಮಸ್ಯೆಯ ಕೂಪವನ್ನೇ ತಳೆಯುತ್ತಿದೆ. ಹಾಗೆ ನೋಡಿದರೆ ಭಾರತೀಯ ಪರಂಪರೆ, ಇತಿಹಾಸ, ಪುರಾಣ, ಸಾಹಿತ್ಯ, ಸಂಸ್ಕೃತಿ, ಕಲಾ ಸಹಿತ ಎಲ್ಲಾ ಕ್ಷೇತ್ರಗಳಲ್ಲಿ ಸಾರ್ವಕಾಲಿಕ ಮೌಲ್ಯದ ಸಾಧನೆಯಾಗಿರುವುದು ಈ ರೀತಿಯ ಏಕಾಗ್ರತೆಯನ್ನು ಹೊಂದಿದ ವ್ಯಕ್ತಿಗಳಿಂದ.

ಏಕಾಗ್ರತೆ. Concentration ಎಂದರೇನು? ಒಂದು ರೀತಿಯಲ್ಲಿ ವ್ಯಾಖ್ಯಾನಕ್ಕೆ ಮೀರಿದ ಪ್ರಶ್ನೆ ಇದು ಎಂಬ ತಾರ್ಕಿಕ ಉತ್ತರ ದೊರೆಯ ಬಹುದು. ಆದರೆ, ಪರಂಪರೆ ಅಂತಃಸತ್ವವನ್ನು ಒಂದಿಷ್ಟು ಬಗೆದು ನೋಡಿದರೆ ನಿಜಾರ್ಥವು ಖಂಡಿತವಾಗಿಯೂ ದೊರೆಯುವುದು. ಒಂದು ಪ್ರಾತಿನಿಧಿಕ ವಾದ ಉದಾಹರಣೆಯನ್ನು ನೀಡುವುದಾದರೆ–ಯೋಗ. ದೈಹಿಕ ಮತ್ತು ಮಾನಸಿಕವಾದ ಏಕಾಗ್ರತೆಯನ್ನು ಏಕಕಾಲದಲ್ಲಿ ರೂಪಿಸುವ ಬಗೆ ಇದು. ಆದ್ದರಿಂದ, ಭಾರತದ ಈ ಕೊಡುಗೆ ಈಗ ವಿಶ್ವಮಾನ್ಯತೆಯನ್ನು ಪಡೆಯಲು ಸಾಧ್ಯವಾಗಿದೆ.

ಆದರೆ, ಅಂತಹ ಹಿನ್ನೆಲೆ ಈಗೆಲ್ಲಿದೆ ? ಒಂದು ರೀತಿಯಲ್ಲಿ ಪ್ರತೀ ಕ್ಷಣವೂ ಏಕಾಂತಕ್ಕೆ ಅಥವಾ ಏಕಾಗ್ರತೆಗೆ ಭಂಗ ಉಂಟಾ ಗುವ ಜೀವನ ಶೈಲಿಯು ಅಯಾಚಿತವಾಗಿ ಅಥವಾ ಅನಿ ವಾರ್ಯವಾಗಿ ನಮಗೆ ಬಂದೊದಗಿದೆ. ಸಾಧನೆಯ ಹಾದಿ ಯಲ್ಲಿ ಏಕಾಗ್ರತೆಯನ್ನು ಕ್ಷಣಕ್ಷಣಕ್ಕೂ ಕಳೆದುಕೊಳ್ಳುವಂತಾಗಿದೆ. ಹಾಗೆಂದು, ಸಮಕಾಲೀನವಾದ ಜಗತ್ತಿನಲ್ಲಿ ಏಕಾಗ್ರತೆಯೇ ಇಲ್ಲ; ಹೊಸತನಗಳನ್ನು ಒದಗಿಸುವ ಸಾಧನಗಳೇ ಆಗಿಲ್ಲ ಎಂದು ಅರ್ಥವಲ್ಲ. ಈ ಚಿಂತನೆಗಳಿಗೆ ಸಾರ್ವತ್ರಿಕ ರೂಪ ದೊರೆಯಬೇಕು ಎಂಬ ಆಶಯ.

ಏಕಾಗ್ರತೆಗೆ ಮತ್ತು ಗುರಿಸಾಧನೆಗೆ ಸಂಬಂಧಿತ ಮಹಾ ಭಾರತದ ಕತೆಯೊಂದನ್ನು ಇಲ್ಲಿ ಉಲ್ಲೇಖೀಸುವುದು ಸೂಕ್ತವಾಗ ಬಹುದು. ಮರದ ತುದಿ ರೆಂಬೆಯಲ್ಲಿದ್ದ ಪಕ್ಷಿಯ ಕಣ್ಣನ್ನು ಬಾಣಕ್ಕೆ ಗುರಿಯಾಗಿ ಗುರುಗಳು ನೀಡಿದ್ದಾರೆ. ಉಳಿದವರಿಗೆಲ್ಲ ಮರ, ಎಲೆ, ರೆಂಬೆ, ಹಕ್ಕಿ ಕಾಣಿಸಿದರೆ ಅರ್ಜುನನಿಗೆ ಹಕ್ಕಿಯ ಕಣ್ಣು ಮಾತ್ರ ಗೋಚರಿಸಿದೆ. ಹೀಗಾಗಿ, ಅನೇಕ ಸಾಧ್ಯತೆಗಳನ್ನು ಮತ್ತು ಹೊಂದಬೇಕಾದ ಏಕೈಕ ಗುರಿಯ ಬಗ್ಗೆ ವಿವರಿಸುವ ಕಥಾನಕವಿದು.

ಸಮಕಾಲೀನ ಸಂದರ್ಭದಲ್ಲಿ ಅನೇಕ ಸಾಧ್ಯತೆಗಳು ಏಕಕಾಲಕ್ಕೆ ಲಭ್ಯ ಆಗಿರುವುದೇ ಆಧುನಿಕ ರೀತಿಯ ಅಸಹಜ ಒತ್ತಡಗಳಿಗೆ ಕಾರಣವಾಗಿದೆ.

ಈ ಬಗ್ಗೆ ಕೇವಲ 25–30 ವರ್ಷ ಹಿಂತಿರುಗಿ ನೋಡಿದರೆ ಸಾಕು. ಆ ಕಾಲಕ್ಕೆ ಒಂದು ಕಾದಂಬರಿಯ, ದೈನಿಕ ಸಹಿತ ಎಲ್ಲಾ ನಿಯತಕಾಲಿಕ ಗಳ, ಸಾಹಿತ್ಯ ಕೃತಿಗಳ ಓದುವಿಕೆ ಒಂದೇ ಹಂತದಲ್ಲಿ ಪೂರ್ಣ ವಾಗುತ್ತಿತ್ತು. ಅಂದರೆ, ಒಂದು ಕಾದಂಬರಿಯನ್ನು ಓದಲು ಕೈಗೆತ್ತಿ ಕೊಂಡರೆ, ಅದರ ಮೊದಲ ಪುಟದಿಂದ ಕೊನೆಯ ಪುಟದ ತನಕದ ಓದು ಸತತವಾಗಿರುತ್ತಿತ್ತು. ಇದೇ ಮಾತು ಭಜನೆ, ಸಂಕೀರ್ತನೆ, ಸಂಗೀತಗೋಷ್ಠಿ, ಯಕ್ಷಗಾನ, ಹರಿಕತೆ ಮುಂತಾದ ಎಲ್ಲಾ ಲಲಿತ ಕಲೆಗಳ ವೀಕ್ಷಣೆ–ಕೇಳುವಿಕೆಗೂ ಅನ್ವಯ.

ರೇಡಿಯೋಗದಲ್ಲಿನ ನಿರ್ದಿಷ್ಟ ಕಾರ್ಯ ಕ್ರಮಗಳನ್ನು ಆಲಿಸು ವುದು; ಟಿವಿಯ ಆರಂಭಿಕ ವರ್ಷಗಳಲ್ಲಿ ಧಾರಾವಾಹಿಗಳ ವೀಕ್ಷಣೆ ಕೂಡಾ. ಎಲ್ಲವೂ ಏಕಾಗ್ರತೆಯ ಚೌಕಟ್ಟಿನಲ್ಲಿರುತ್ತಿತ್ತು. ಈ ಮೂಲಕ ಏನು ಸಾಧನೆಯಾಯಿತು ಎಂಬ ಪ್ರಶ್ನೆ ಉದ್ಭವಿಸಿದರೆ, ಅದಕ್ಕೆ ಉತ್ತರ: ಮನಸ್ಸನ್ನು ಅರಳಿಸುವ ರಸಗ್ರಹಣ.

ಆದರೆ, ಈಗ ನೂರಾರು ಅಡಚಣೆಗಳು. ಕಾದಂಬರಿ ಅಥವಾ ಸಾಹಿತ್ಯ ಕೃತಿಯನ್ನು ಓದಲು ಆರಂಭಿಸಿದ ಅಥವಾ ಮಧುರ ವಾದ ಸಂಗೀತ ಆಸ್ವಾದಿಸಲು ಆರಂಭವಾದ ರಿಂಗಣಗೊಳ್ಳುವ ಸೆಲ್ಫೋನ್, ವಾಟ್ಸಾಪ್–ಇನ್ಸ್ಟಾಗ್ರಾಂ ಸಂದೇಶಗಳು, ಸ್ನೇಹಿತರ ಕರೆಗಳು ಇತ್ಯಾದಿ! ಹೀಗೆ, ಕಾದಂಬರಿಯ ಮೊದಲ ಪುಟವನ್ನೇ ಹತ್ತಾರು ಬಾರಿ ಓದಿದವರಿರಬಹುದು; ಇದು ಆಕ್ಷೇಪಣೆಯಲ್ಲ; ನಾವು ಕಳೆದುಕೊಳ್ಳುವ ಸಹೃದಯಿ ಅನುಸಂಧಾನದ ಬಗೆಗಿನ ಆತಂಕ ಅಷ್ಟೆ! ಇತ್ತೀಚೆಗೆ ವಿವಿಧೆಡೆ ಆರಂಭವಾಗಿರುವ ಏಕಾಗ್ರತಾ ಜಾಗೃತಿಯ ಶಿಬಿರಗಳು ಈ ಮಾತನ್ನು ಪುಷ್ಟೀಕರಿಸುತ್ತದೆ.

ಅಂದಹಾಗೆ: ಇದು ಓದಿದ ನೆನಪು ಬಾದಾಮಿಯನ್ನು ರಾತ್ರಿ ನೀರಲ್ಲಿ ನೆನೆಸಿ, ಮರು ಮುಂಜಾನೆ ತಿಂದರೆ, ನೆನಪಿನ ಶಕ್ತಿ ವೃದ್ಧಿಸುತ್ತದೆ. ಆತ ಬಾದಾಮಿಯನ್ನು ತಂದ. ಆದರೆ, ರಾತ್ರಿ ನೀರಲ್ಲಿ ನೆನೆಯ ಹಾಕಲು ಮರೆತ!!!



**ಶಿವಾನಂದ ಜಂಬಗಿ " ಅಥಣಿ "**
**B.Ed teacher**

# ಮುಖ್ಯ ಶಿಕ್ಷಕರ ತರಬೇತಿ ಕೇಂದ್ರಕ್ಕೆ ಉಮಾ ಮಹೇಶ ತಂಬ್ರಳ್ಳಿ ರಿಂದ ಮೈಕಸೆಟ್ ದೇಣಿಗೆ



**ಕೊಪ್ಪಳ :** ಸಾರ್ವಜನಿಕ ಶಿಕ್ಷಣ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಮುಖ್ಯ ಶಿಕ್ಷಕರ ತರಬೇತಿ ಕೇಂದ್ರಕ್ಕೆ ಅಗತ್ಯವಿರುವ ಧ್ವನಿವರ್ಧಕ ಮೈಕ್ ಮತ್ತು ಸ್ಪೀಕರ್ ವನ್ನು ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷೆ ಉಮಾ ಮಹೇಶ್ ತಂಬ್ರಳ್ಳಿ ಅವರಿಂದ ದೇಣಿಗೆಯಾಗಿ ನೀಡಲಾಯಿತು. ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ಉತ್ತಮ ರೂಪ ರೇಶಗಳನ್ನು ಸಿದ್ಧಪಡಿಸಿ, ಸಂಪನ್ಮೂಲ ವ್ಯಕ್ತಿಗಳಿಂದ ಮುಖ್ಯ ಶಿಕ್ಷಕರಿಗೆ ತರಬೇತಿ ನೀಡುವ

ಈ ಕೇಂದ್ರಕ್ಕೆ ಧ್ವನಿವರ್ಧಕವನ್ನು ತರಬೇತಿ ಶಿಬಿರದ ವೇಳೆ ಶಿಕ್ಷಣ ಇಲಾಖೆಯ ವಿಜ್ಞಾನ ಉಪ ಕೇಂದ್ರದಲ್ಲಿ ನೀಡಲಾಯಿತು. ಸುಮಾರು 150ಕ್ಕೂ ಹೆಚ್ಚು ಮುಖ್ಯ ಶಿಕ್ಷಕರು ಶಿಬಿರದಲ್ಲಿ ಭಾಗವಹಿಸಿದ್ದರು.

ಕ್ಷೇತ್ರ ಶಿಕ್ಷಣಾಧಿಕಾರಿ ಶಂಕ್ರಯ್ಯ, ಇತರ ಪ್ರಮುಖರು ಮತ್ತು ಇನ್ನರ್ ವೀಲ್ ಕ್ಲಬ್ ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು, ಇದರಲ್ಲಿ ಕಾರ್ಯದರ್ಶಿ ಮೀನಾಕ್ಷಿ ಬಣ್ಣದ ಬಾವಿ, ಉಪಾಧ್ಯಕ್ಷೆ ಮಧು ಶೆಟ್ಟರ್, ಐಎಸ್‌ಒ ಮಧು ನಿಲೋಗಲ್, ಸಂಪಾದಕಿ ನಾಗವೇಣಿ, ಕಾರ್ಯಕಾರಣಿ ಸಮಿತಿ ಸದಸ್ಯರಾದ ತ್ರಿಶಾಲ ಪಾಟೀಲ್, ಪಾರ್ವತಿ ಪಾಟೀಲ್, ಸುಜಾತಾ ಪಟ್ಟಣಶೆಟ್ಟಿ, ತ್ರಿವೇಣಿ, ಮತ್ತು ಹೇಮಾ ಉಪಸ್ಥಿತರಿದ್ದರು.

# ಜ್ಞಾನ ವಿಕಾಸ ಕಾರ್ಯಕ್ರಮದಡಿ ಅಕ್ಕಿಹೆಬ್ಬಾಳು ವಲಯದ ಕಾರ್ಯ ಕ್ಷೇತ್ರ ಮಕರಂದ ಕೇಂದ್ರದ ವಾರ್ಷಿಕೋತ್ಸವ



**ಕೃಷ್ಣರಾಜಪೇಟೆ :** ಕಾರ್ಯಕ್ರಮವನ್ನು ಪಂಚಾಯತಿ ಅಧ್ಯಕ್ಷರಾದ ಹರೀಶ್ ರವರು ಜ್ಯೋತಿ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಹರೀಶ್ ರವರು ಧರ್ಮಸ್ಥಳ ಸಂಸ್ಥೆಯವರು ಸದಸ್ಯರುಗಳಿಗೆ ಸಾಲ–ಸೌಲಭ್ಯಗಳನ್ನು ಕೊಡುವುದರ ಜೊತೆಗೆ ಆರ್ಥಿಕವಾಗಿ ಮುನ್ನಡೆಸುತ್ತಿದ್ದರೆ ಅದರ ಜೊತೆ ಜೊತೆಗೆ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಮಹಿಳೆಯರಿಗೆ ಪ್ರತಿ ತಿಂಗಳು ಒಬ್ಬ ಸಂಪನ್ಮೂಲ ವ್ಯಕ್ತಿಯನ್ನು ಕರೆಸಿ ಶಿಕ್ಷಣ, ಆರೋಗ್ಯ , ಕಾನೂನು, ಸರ್ಕಾರಿ ಯೋಜನೆಯ ಬಗ್ಗೆ ಮಾಹಿತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಮಹಿಳೆಯರು ಈಗ ಸ್ವಾವಲಂಬಿ ಜೀವನ ನಡೆಸಲು ಸಾದ್ಯವಾಗಿದೆ ಜೊತೆಯಲ್ಲಿ ನಿರ್ಗತಿಕರಿಗೆ ಮಾಶಾಸನ ನೀಡುತಿದ್ದಾರೆ, ವಾತ್ಸಲ್ಯ ಮನೆಗಳ ನಿರ್ಮಾಣ ಮಾಡುತ್ತಿದ್ದಾರೆ, ವೃತ್ತಿಪರ ಶಿಕ್ಷಣ ಮಾಡುವ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಮಾಶಾಸನ ನೀಡುತಿದ್ದಾ–ರೆ, ಎಲ್ಲಾ ಉಪಯೋಗಗಳನ್ನು ಸದಸ್ಯರು ಗಳು ಪಡೆದುಕೊಳ್ಳಬೇಕೆಂದು ತಿಳಿಸಿದರು,_

ಕಾರ್ಯಕ್ರಮದಲ್ಲಿ ವಲಯದ ಪಂಚಾಯತಿ ಸದಸ್ಯರಾದ ಅತಿಕ್, ಒಕ್ಕೂಟದ ಅದ್ಯಕ್ಷರಾದ ಜ್ಯೋತಿ, ಜ್ಞಾನ ವಿಕಾಸ ಕಾರ್ಯಕ್ರಮದ ಇಂದಿನ ಸಬೆಯ ಅದ್ಯಕ್ಷರಾದ ರುಕ್ಮಿಣಿ, ಮೇಲ್ವಚಾರಕರಾದ ಶಿಲ್ಪ ಜ್ಞಾನವಿಕಾಸ ಸಮನ್ವಯ ಆಧಿಕಾರಿಯವರಾದ ಅನಿತ ಸೇವಾಪ್ರತಿನಿಧಿಯವರಾದ ಉಮಾಮಹೇಶ್ವರಿ, ಜ್ಞಾನವಿಕಾಸ ಕೇಂದ್ರದ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು,

**ವರದಿ,ಎಸ್ ರವಿ ಹೊನ್ನೇನಹಳ್ಳಿ**

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State